


ಸಂಪುಟ ೨೫] ಜುಲೈ ೧೯೬೬ [ಸಂಚಿಕೆ ೪

ಕುಹಕಿಡಿಗಳು

ರೂಪಾಯಿನ ಅಪಮೌಲ್ಯವಲ್ಲ. ಈಗ ಆಗಿದ್ದು, ಅದು ಯಾವಾಗಲೋ ಆಗಿ ಹೋಗಿತ್ತು. ಈಗ ಆದದ್ದು ಕಾಂಗ್ರೇಸಿನ ರೀತಿ, ನೀತಿ, ಹಾಗೂ ನಾಯಕತ್ವದ ಅಪಮೌಲ್ಯ ಎಂದೊಬ್ಬರ ಅಂಬೋಣ

* * * *

ರೂಪಾಯಿ ಅಪಮೌಲ್ಯದ ವಿಷಯ ಚರ್ಚೆ ನಡೆಸಲು, ಮಾಜಿ ಮಂತ್ರಿಗಳ ಸಾರ್ವತ್ರಿಕ ಸಭೆಯನ್ನು ಕರೆಯುತ್ತಾರಂತೆ.

ಸಭೆಯ ಸಂಖ್ಯೆ ವಿಪರೀತವಾಗುತ್ತಲ್ಲ !!

* * * *

ಚಂದ್ರಗ್ರಹದ “ಗುರುತು” ಹಾಕುತ್ತಿರುವ ಸರ್ವೆಯರ್ ವಿಷಯ ಕೇಳಿದ ಮೇಲೆ, ನಮ್ಮೂರ ಬಾಂದ್‌ನವರ ಬೀದಿ ರಾಯರುಗಳಿಗೆ ಜಂಭ ಬಂದಿದೆಯಂತೆ.

—ನಮ್ಮ ಸರ್ವೇಯರ್ ದಾಯಾದೀನೆ ಅಲ್ಲೂ ಹೋಗಿರೋದು ಅಂತ.

* * * *

ಜುಲೈ ೫ನೇ ತಾರೀಖು, ದಿಲ್ಲಿಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆ ಸೇರುವ ವೇಳೆಗೆ, ಮಹಾರಾಷ್ಟ್ರದ ಮಹಾನಾಯಕರು ದಿಲ್ಲಿಯಲ್ಲಿ ಸೇನಾಪತಿ ಬಾಪಟ್ ಅವರ ಕೈಲಿ ಉಪವಾಸ ಶುರುಮಾಡಿಸುತ್ತಾರೆಂಬುದು ಖಚಿತವಲ್ಲವಂತೆ.

* * * *

ಹೊಸಪೇಟೆಯಲ್ಲಿ ಉಕ್ಕಿನ ಕಾರ್ಖಾನೆ ಬರದೆ ಇದ್ದರೂ ನಮ್ಮ ಮುಖಂಡರು ಉಕ್ಕಿನ ಮನುಷ್ಯರು ಅಂತ ಗಡಿ ಚಳುವಳಿಯಲ್ಲಿ ತೋರಿಸಿಕೊಟ್ಟಿದ್ದಾರೆ.

ದೇಶಕ್ಕಿಂತ ಪಕ್ಷ ಹೆಚ್ಚೇ ?—ಪಕ್ಷಕ್ಕಿಂತ ವ್ಯಕ್ತಿ ಹೆಚ್ಚೇ ? ಎಂದು ಕೇಳಲಾಗುತ್ತಿದೆಯಂತೆ.

—ವ್ಯಕ್ತಿ ಇದ್ದರಲ್ಲವೇ ಪಕ್ಷ!—ಪಕ್ಷ ಇದ್ದರಲ್ಲವೇ ದೇಶದ ಉದ್ಧಾರ! ಆಗುತ್ತಾ ಇರುವುದನ್ನು ನೋಡಿದರೆ ತಿಳಿಯುವುದಿಲ್ಲವೇ ?

* * * *

ಜುಲೈನಲ್ಲಿ ರಷ್ಯಾಕ್ಕೆ ಕಾಮರಾಜರ ಭೇಟಿ

(ಪತ್ರಿಕಾವರದಿ)

—ಕರಡಿಮರಿಯನ್ನು ಜತೆಗೆ ಕರೆದುಕೊಂಡು ಹೋಗುತ್ತಾರೆ ಎಂಬುವುದು ಸುಳ್ಳಂತೆ.

* * * *

"ನಮ್ಮ ಹಳ್ಳಿಯಲ್ಲಿ ಇಲಿಗಳ ಕಾಟ ಹೆಚ್ಚಾಗಿವೆ. ಯಾವನಾದರೂ ಕಿಂದರ ಜೋಗಿಯ ವಿಳಾಸವನ್ನು ಕೊಡುತ್ತೀರಾ" ಎಂದು ಗ್ರಾಮಪಂಚಾಯಿತಿ ಅಧ್ಯಕ್ಷರು ಪ್ರಶ್ನೆ ಕೇಳಿದ್ದಾರೆ;

—ಚುನಾವಣಾ ಮುಗಿಯೋತನಕ ಕಿಂದರಜೋಗಿ ಎಲ್ಲಿ ಸಿಕ್ತಾನಪ್ಪ! ಆ ಕೆಲಸದಲ್ಲೇ ಮುಳುಗಿರ್ತಾನೆ!!

* * * *

ಹಳೆ ದೇವಸ್ಥಾನದಿಂದ ಕದಿಯಲ್ಪಟ್ಟಿದ್ದ ಆಂಜನೇಯ ವಿಗ್ರಹವು ಈಗ ಅಮೆರಿಕಾದ ಶ್ರೀಮಂತರ ಮನೆಯಲ್ಲಿ ಸ್ಥಾಪಿತವಾಗಿದೆಯಂತೆ.

—ತನ್ನ ಹೊಸ ಭಕ್ತರ ಜೀವನ ನೋಡಿ ಹನುಮಂತ ಹುಚ್ಚೆದ್ದಿರಬೇಕು!

* * * *

ರೈಲು ಸತ್ಯಾಗ್ರಹ ಮಾಡಿದ ಮಂದಿ ಹಾರ್ಮೋನಿಯಂ ಹಿಡಿದುಕೊಂಡು ಭಜನೆಗೆ ಶುರುಮಾಡಿದರಂತೆ.

—ಸಂಗೀತಕ್ಕೆ ಬೆದರಿ ರೈಲ್ ಇಂಜಿನ್ನು ಹಿಮ್ಮೆಟ್ಟಿತು ಎನ್ನುವುದು ಕೇವಲ ಕುಹಕ.

* * * *

ತಿಂಗಳಿಗೆ ಎರಡು ಶನಿವಾರ ಸರ್ಕಾರಿ ಕಚೇರಿಗಳಿಗೆ ರಜಾ ಕೊಡಬೇಕಂತೆ.

—ನ್ಯಾಯವೇ ? ಅಂಗಡಿ ಬಾಗಿಲಲ್ಲಿ ಕ್ಯೂಕಾಯುಕ್ಕೆ ತಂದೇನೂ ಹೋಗಿ ನಿಲ್ಲಲಿ. ಬರೀ ಮಕ್ಕಳಿಗೇ ವಿರಾಮವಲ್ಲವಲ್ಲ ?

‡ * * *

ಇದು ಕೇಳಿದ್ದಿರಾ ?

ಪುಷ್ಪದಂತಿ, ಪುಷ್ಪದಂತಿ ಎಂದೊಬ್ಬ ಗಂಧರ್ವನಿದ್ದ. ಅವನು ನಕ್ಕರೆ ಮಲ್ಲಿಗೆ ಮೊಗ್ಗುಗಳ ದಂಡೆಯಂತೆ ಅವನ ಬಾಯಲ್ಲಿ ಹಲ್ಲು ಕಾಣಿಸುತ್ತಿದ್ದುವು.

ಅವನ ಸ್ನೇಹಿತ ಸುಮ ಗಂಧಿ ಅಂತ. ಅವನ ಉಸಿರುಬಿಟ್ಟರೆ ಕಾಡ ಹೂವಿನ ಪರಿಮಳದಂತೆ ವಾಸನೆ ಪಸರುತ್ತಿತ್ತು.

ಸಂಜೆ ಮುಂದೆ ಇಬ್ಬರೂ ಕಬ್ಬನ್ ಪಾರ್ಕಿನಲ್ಲಿ ಕಾಫಿ ಕುಡಿದು ಹತ್ತಿರವೇ ಇದ್ದ ಹುಲ್ಲುಗಾವಲಿನ ಮೇಲೆ ಕರವಸ್ತ್ರ ಹಾಸಿಕೊಂಡು ಮಲಗಿದ್ದರು, ಗರುಕೆ ತುಂಡನ್ನು ಕಚ್ಚುತ್ತಾ.

ರಾತ್ರಿಯ ಸಂತೋಷಕೂಟಕ್ಕೆ ತಿಲೋತ್ತಮೆ ಮನೆಗೆ ಈ ರಾತ್ರಿ ಹೋಗ ಬೇಕಪ್ಪಾ" ಅಂದ ಪುಷ್ಪದಂತಿ.

ಸುಮಗಂಧಿ ಸುಮ್ಮಗೇ ಇದ್ದ. ಅಸೂಯೆ ಪಟ್ಟಂತೆ ಕಾಣಲಿಲ್ಲ.

ಪುಷ್ಪದಂತಿಗೆ ರೇಗಿತು. ಸ್ವಲ್ಪ ಛಂಡಾಯಿಸೋಣ ಅಂತ "ನಿನ್ನ ಕರೆಯ ಲಿಲ್ಲವೇ" ಅಂತ ಕೇಳಿದ.

"ಇಲ್ಲ" ಅಂದ ಸುಮಗಂಧಿ, ಸಂತಸದಿಂದಲೇ ಇದ್ದ. ಆಗ ಸ್ವಲ್ಪ ಜಂಭ ಬಂತು ಪುಷ್ಪದಂತಿಗೆ. "ಮೊನ್ನೆ ಫೋನ್ ಮಾಡಿದ್ದಳು ತಿಲೋತ್ತಮೆ, ನೀನು ಬರಲೇ ಬೇಕು. ಇಲ್ಲದೆ ಇದ್ದರೆ ನನ್ನ ಹೃದಯ ಬಿಕೋ ಅಂತಿರುತ್ತೆ" ಅಂತ ಹೇಳಿದ.

"ಹೌದೇನು ?" ಎಂದ ಸುಮಗಂಧಿ.

"ಇವತ್ತು ಬೆಳಿಗ್ಗೆ ಫೋನ್ ಮಾಡಿದೆ ಬರ್ತೀನಿ ಅಂತ. ಅವಳ ಫೋನ್ ನಂಬರು ೨೯೦೦೦" ಅಂದ ಪುಷ್ಪದಂತಿ.

"ಅಲ್ಲ. ಅವಳ ಫೋನ್ ನಂಬರು ೨೯೦೦೧" ಅಂದ ಸುಮಗಂಧಿ "ಅಲ್ಲ ಕಣೋ ೨೯೦೦೦ ನಾನೇ ಫೋನ್ ಮಾಡಿದೆ ಉತ್ತರ ಬಂತು" ಅಂದ ಪುಷ್ಪದಂತಿ.

"ಉತ್ತರ ಕೊಟ್ಟೋನು ನಾನೇ, ನನ್ನ ಮನೆಯಿಂದ" ಅಂದ ಸುಮಗಂಧಿ.

"ಯಾಕೆ ಹಾಗೆ ಉತ್ತರ ಕೊಟ್ಟೆ ಮತ್ತೆ" ಅಂದ ಪುಷ್ಪದಂತಿ

"ನಿಮ್ಮನೆಗೆ ನಾನು ಹೋಗೋಣ ಅಂತ ಅನ್ನಿಸಿತು" ಅಂದ ಸುಮಗಂಧಿ.

ಗಂಧರ್ವರಲ್ಲವೇ ? ಜಗಳ ಕಾಯಲಿಲ್ಲ. ಮಾರಾಮಾರಿ ಆಗಲಿಲ್ಲ. ಹಲ್ಲು ಉದುರಲಿಲ್ಲ. ಉಸಿರು ಸಿಕ್ಕಿಹಾಕಿಕೊಳ್ಳಲಿಲ್ಲ.

ಪ್ರಸನ್ನನ ಪರೀಕ್ಷೆ

ಪ್ರಸನ್ನನ ಪರೀಕ್ಷೆ ಆರಂಭವಾಗುವ ಹೊತ್ತು ಬಂದೇ ಬಿಟ್ಟಿತು, ಶೀನಣ್ಣ ಹಿಂದಿನ ದಿನವೆಲ್ಲಾ ಹೈಬ್ರಿಡ್ ಜೋಳದ ಬೀಜವನು ಖರೀದಿ ಮಾಡುವುದರಲ್ಲೇ ಕಾಲಕಳೆದಿದ್ದ.

ದೇಶದ ವ್ಯವಸಾಯ ಉತ್ಪನ್ನವನ್ನು ಹೆಚ್ಚಿಸುವ ಪವಿತ್ರ ಕಾರ್ಯದಲ್ಲೇ ಅನೇಕರು ತಮ್ಮ ಜೀವನವನ್ನು ತೇಯುತ್ತಿದ್ದಾರೆ. ಅಂತವರಲ್ಲಿ ಶೀನಣ್ಣ ಒಬ್ಬನು. ಎಕರೆಗೆ ನಲವತ್ತು ಕ್ವಿಂಟಲ್ ಜೋಳ ಬೆಳೆದರೆ ದೇಶದಲ್ಲಿ ಆಹಾರಧಾನ್ಯ ಹೆಚ್ಚುವರಿಯಾಗುವುದರಲ್ಲಿ ಸಂಶಯವಿಲ್ಲ. ನಮ್ಮ ಊರಿನ ಚಿಕ್ಕ ಕೆರೆಯ ಹಿಂದೆ ನಾಲ್ಕು ಎಕರೆ ಭೂಮಿಯಿರುವ ಶೀನಣ್ಣನಿಗೆ ಮೇಲಿನ ಲೆಕ್ಕಾಚಾರದಂತೆ ಒಂದು ನೂರಾ ಅರವತ್ತು ಕ್ವಿಂಟಲ್ ಜೋಳಬರುತ್ತದೆ. ಒಂದು ಕ್ವಿಂಟಲ್ಲಿಗೆ ಕನಿಷ್ಠಪಕ್ಷ ತೊಂಬತ್ತು ರೂಪಾಯಿ ಆದಾಯ ಬಂದರೆ ಹನಿನಾಲ್ಕು ಸಾವಿರದ ನಾಲ್ಕು ನೂರು ರೂಪಾಯಿ ಬರುತ್ತದೆ. ಮೇಲಿನ ನಾಲ್ಕು ಸಾವಿರದ ನಾನೂರು ಖರ್ಚಿಗೆ ಹೋದರೆ nett ಹತ್ತು ಸಾವಿರ ಉಳಿಯುತ್ತದೆ. ಯಾರಿಗೆ ಬೇಡ! ಶೀನಣ್ಣ ಎಂಟು ರೂಪಾಯಿಗೆ ಕೇಜಿಯಂತೆ ನಾಲ್ಕು ಕೇಜಿ ಜೋಳವನ್ನು ಕೊಂಡುಕೊಂಡ. ಆ ಭರದಲ್ಲೇ ಒಂದೂವರೆ ದಿನ ಕಳೆಯಿತು. ಬೀಜವನ್ನು ಕೊಂಡ ಮೇಲೆ ಚಿಕ್ಕ ಕೆರೆಯಲ್ಲಿ ನೀರಿಲ್ಲವೆಂಬ ವಿಷಯ ನೆನಪಾಯಿತು. ಅವನ್ನು ನೆನೆದು ನಿಟ್ಟುಸಿರುಬಿಟ್ಟ ಶೀನಣ್ಣ. ಕೊಂಡ ಬೀಜವನ್ನು ಮಾರಿ ನಿವ್ವಳ ನಷ್ಟ ಐದು ರೂಪಾಯನ್ನು ಪಡೆದ. ಜೊತೆಗೆ ಇನ್ನರ್ಧ ದಿನವೂ ಹೋಯಿತು. ಗುರು ಪಂಚಮಕ್ಕೆ ಬಂದರೂ ಪೂರ್ವ ಜನ್ಮದ ಪ್ರಾರಬ್ಧ ಬಿಡಬೇಕಲ್ಲ! ಇರಲಿ. ಶೀನಣ್ಣನಿಗೆ ಕೇವಲ ಐದು ರೂಪಾಯಿ ಎರಡು ದಿನ ಮಾತ್ರ ಹೋಯಿತು. ನಮ್ಮ ಪಕ್ಕದ ಊರಿನ ನಾಲೆಯ ಕೆಳಗೆ ಹೈಬ್ರಿಡ್ ಜೋಳ ಹಾಕಿದವರಿಗೆ ಬೀಜ, ಗೊಬ್ಬರ ಮತ್ತು ಒಂದು ಬೆಳೆ ಪೂರಾ ನಷ್ಟವಾಯಿತು. ಬೀಜ ಹುಟ್ಟಲೇ ಇಲ್ಲ.

ಪ್ರಸನ್ನ, (ಹ) ರಾಮು, (ಕೂಳು) ಪಾಂಡಿ ಮೂವರೂ ಈ ಕಾಲವನ್ನು ಇಪ್ಪತ್ತೈದು ಬ್ಯಾಂಕ್‌ಗೆ ಚಿನ್ನಿದಾಂಡ, ಆಡುವುದರಲ್ಲೇ ಕಳೆದರು. ಮೊದಲು ಕನ್ನಡ ಪೇಪರ್ ತಾನೇ. ಅದರಲ್ಲಿ ಯಾವ ಕಷ್ಟವೂ ಇಲ್ಲ ಎಂದುಕೊಂಡಿದ್ದರು. ಮನಸ್ಸಿನಂತೆ ಮಹಾದೇವ. ಕನ್ನಡ ಪೇಪರಿನಲ್ಲಿ ಯಾವ ಕಷ್ಟವೂ ಆಗಲಿಲ್ಲ.

ಕನ್ನಡ ಪೇಪರ್ ಮುಗಿಸಿಕೊಂಡು ಬಂದ ಕೂಡಲೇ ಇಂಗ್ಲೀಷಿನ ತಲೆನೋವು ಆರಂಭವಾಯ್ತು. ಅದಕ್ಕೆ ಶಾಲೆಯಲ್ಲಿ ಮೇಷ್ಟರು ಬರೆಸಿದ ನೋಟ್ಸು ಯಾವ ಸಹಾಯವನ್ನೂ ಮಾಡಲಿಲ್ಲ. ನೋಟ್ಸು ಸಹಾಯ ಮಾಡಲೆಂಬ ಉದ್ದೇಶ್ಯವೂ ಮೇಷ್ಟರಿಗಿರಲಿಲ್ಲ. ಅವರು " S. S. L. C. ಕಾಮ್ರೇಡ್ ಮ್ಯಾಗಜೀನ " ಎಂಬ ಮಾಸಿಕದಿಂದ ಎತ್ತಿಕೊಂಡ ಆಣಿ ಮುತ್ತುಗಳನ್ನು, ಅಚ್ಚಿನ ತಪ್ಪುಗಳ ಸಮೇತ ಬೋರ್ಡಿನಮೇಲೆ ಬರೆದಿದ್ದರು. ಅದನ್ನು ಹುಡುಗರು ಸ್ಪೆಲಿಂಗ್ ತಪ್ಪುಗಳ ಸಮೇತ ಬರೆದುಕೊಂಡಿದ್ದರು. ಓದಿದಾಗ ಏನೂ ಅರ್ಥವಾಗಲಿಲ್ಲ. ಓದುವುದೂ ಅಸಾಧ್ಯ ವಾಗಿತ್ತು,

ಆದುದರಿಂದ ಈ ಬಗೆಗೆ ಗಮನವನ್ನು ಹರಿಸುವುದು ಅಗತ್ಯವೆಂಬ ತೀರ್ಮಾ ನಕ್ಕೆ ಬಂದ ಶೀನಣ್ಣ ಇಂಗ್ಲೀಷ್ ಪೇಪರಿನ ಹಿಂದಿನ ರಾತ್ರಿ ಗೌರೀ ಶಂಕರಕ್ಕೆ ಊರಿಗೆ ಹೊರಟ. ಆ ಬಸ್ಸಿನಲ್ಲಿ ಓವರ್‌ಲೋಡ್ ಆಗಿತ್ತು. ಐವತ್ತೆರಡು ಜನರು ಕುಳಿತು ಕೊಳ್ಳುವ ಆ ಬಸ್ಸಿನಲ್ಲಿ ನೂರಾ ಐವತ್ತೆರಡು ಜನರನ್ನು ತುರುಕಿದ್ದರು. ಅದೇ ಹೊತ್ತಿಗೆ ಸರಿಯಾಗಿ D. S. P. ಸಾಹೇಬರು ಆಕಸ್ಮಾತ್ ಬಸ್ ಸ್ಟ್ಯಾಂಡಿಗೆ ದಯ ಮಾಡಿಸಿದರು, ಬಸ್ಸು ಪೋಲೀಸ್ ಸ್ಟೇಷನ್ನಿಗೆ ಹೊರಟಿತು. ಶೀನಣ್ಣ ಬೊಂಬಾಯಿ ಲಾರಿಯೊಂದನ್ನು ಹತ್ತಿ ಊರಿಗೆ ಹೊರಟ. ಅದು ಚಿತ್ರದುರ್ಗದಿಂದ ನಾಲ್ಕು ಮೈಲಿ ದೂರದಲ್ಲಿ ಮಗಚಿಕೊಂಡಿತು. ಶೀನಣ್ಣ ಬೆದರದೆ ವೈಶಂಪಾಯನ ಸರೋ ವರದಿಂದ ಮೇಲೆದ್ದ ದುರ್ಯೋಧನನಂತೆ ಲಾರಿಯ ಕ್ಯಾಬಿನ್ನಿನಿಂದೆದ್ದು ಇನ್ನೊಂದು ಲಾರಿಯನ್ನು ಹತ್ತಿ ಊರಿಗೆ ಬಂದ. ಆಗ ರಾತ್ರಿ ಒಂದು ಗಂಟೆ.

ಒಂದು ಗಂಟೆ ಹತ್ತು ನಿಮಿಷಕ್ಕೆ ಶೀನಣ್ಣ ಬಂದು ನಮ್ಮ ಮನೆಯ ಬಾಗಿಲು ತಟ್ಟಿದ. ನಾನು ಎದ್ದು ಹೋಗಿ ಬಾಗಿಲು ತೆಗೆದೆ.

" ಎಲೋ ಸೋಮಾರಿ, ಸಂಜೆಗಾಗಲೇ ಮಲಗಿದೆಯಾ ?" ಎಂದ.

'ಈಗ ಬೆಳಗಿನ ಜಾವ ಶೀನಣ್ಣ' ಎಂದೆ.

"ಶುದ್ಧ ಅಯೋಗ್ಯ ನಿನ್ನಿಂದ ಮೂರು ಕಾಸಿನ ಕೆಲಸ ಆಗುವುದಿಲ್ಲ."

"ಕೆಲಸ ಆಗಬೇಕಾದರೆ ಶಾಸಕರು ಮತ್ತು ಮಂತ್ರಿಗಳಿಂದ ಮಾತ್ರ ಸಾಧ್ಯ. ನೀನು ನನ್ನ ಬಳಿಗೇಕೆ ಬಂದೆ "

"ನಮ್ಮ ಪ್ರಸ್ಸಿಗೆ ಒಂದಿಷ್ಟು ಇಂಗ್ಲಿಷ್ ಹೇಳಿಕೊಡಬೇಕು. ನೀನು ಬೆಳಗ್ಗೆ ಮೊದಲ ಬಸ್ಸಿಗೆ ದುರ್ಗಕ್ಕೆ ಹೋಗು"

"ಶೀನಣ್ಣ ಇದೆಂತಹ ಅನ್ಯಾಯ. ರಜದಲ್ಲಾದರೂ ಹೆಂಡತಿ ಮಕ್ಕಳ ಜೊತೆಗೆ ಕಾಲಕಳೆಯೋಣವೆಂದಿದ್ದೆ. ಅದೂಕೂಡಾ ನಿನ್ನ ಮನಸ್ಸಿಗೆ ಬರಲಿಲ್ಲವೇ ? ನಿಮ್ಮ ಪ್ರಸನ್ನನಿಗೆ ಪಾಠ ಹೇಳಿ ಕೊಡಲು ಅವರ ಮೇಷ್ಟರಿಲ್ಲವೇ ?"

"ತಲೆ ಬೋಳಿಸಿದರು ! ಹೇಳಿದ್ದನ್ನು ಕೇಳು"

"ಶೀನಣ್ಣ ಈಗ ಮಹಾನಿಶೀಥಸಮಯ ತಲೆ ಬೋಳಿಸುವ ಸುದ್ದಿಯೇಕೆ. ಅಂದಹಾಗೆ ಯಾರತಲೆ ? ನನ್ನದೋ ಪ್ರಸನ್ನನದೋ ಅವನ ಮೇಷ್ಟ್ರರದೋ ?"

"ಎಲೆ ಬಳಿಯೋ ಗುಂಡ ಅಂದ್ರೆ ಉಂಡವರೆಷ್ಟು ಜನ ಅಂದನಂತೆ. ನಾನು ಹೇಳಿದಷ್ಟು ಮಾಡು ಅಂಥ ಕಮ್ಮಿನ ಮೇಷ್ಟ್ರಿದ್ದರೆ ನಿನಗೆ ಯಾರು ಹೇಳುತ್ತಿದ್ದರು. ನನಗೆ ನಿದ್ದೆ ಬರುತ್ತಿದೆ. ಹೋಗುತ್ತೇನೆ."

ಶೀನಣ್ಣ ಸರಸರನೆ ಹೋಗಿಬಿಟ್ಟ.

ನಾನು ಬೆಳಗಿನ ಜಾವ ಐದು ಗಂಟೆಗೇ ಎದ್ದು ಆರು ಗಂಟೆ ಬಸ್ಸಿಗೆ ವಿಚಿತ್ರ ದುರ್ಗಕ್ಕೆ ಹೊರಟೆ. ಏಳು ಗಂಟೆಗೆ ನಮ್ಮ ಮಾವನ ಮನೆ ಬಾಗಿಲಿನಲ್ಲಿದ್ದೆ. ಮಾವ ಮನೆಯ ಅಂಗಳದಲ್ಲೇ ಮಲಗಿದ್ದ. ಏಕೆ ಎಂದರೆ ಮನೆಯೊಳಗೆ ಮಲಗಲು ಜಾಗ ವಿದ್ದರೆತಾನೇ. ಮದುವೆಯ ಮನೆಯಿದ್ದ ಹಾಗಿತ್ತು.

"ಪ್ರಸನ್ನ ಎಲ್ಲಿ ?" ಎಂದು ಮಾವನನ್ನು ಕೇಳಿದೆ.

"ಯಾಕೆ ?" ಎಂದ ಮಾವ.

"ಪಾಠ ಹೇಳಿ ಕೊಡಬೇಕು."

"ನಿನ್ನ ತಲೆ ಬೋಳಿಸಿತು. ಅವರೆಲ್ಲಾ ನಾಟಕಕ್ಕೆ ಹೋಗಿದ್ದರು. ಈಗತಾನೆ ಬಂದು ಮಲಗಿದ್ದಾರೆ."

"ಈಗ ಎಂಥ ನಾಟಕ ?"

"ಅವರ ಸ್ಕೂಲಿಗೆ ಬೆನಿಫಿಟ್ ಷೋ."

"ಇವೊತ್ತು ಹತ್ತೂವರೆ ಗಂಟೆಗೆ ಪರೀಕ್ಷೆ ಇಟ್ಟುಕೊಂಡು ?"

"ಪರೀಕ್ಷೆ ಇಟ್ಟುಕೊಂಡೇ. ನೀನು ಯಾರು ಕೇಳಲು ? ಯಾವ ಊರಿನ ದೊಣ್ಣೆ ನಾಯಕ ! ನಿನಗೆ ಬುದ್ಧಿಯಿಲ್ಲ. ಪಾಠ ಹೇಳಿ ಕೊಡುತ್ತಾನಂತೆ."

ಹೀಗೆಂದು ಮಾವ ಮನೆಯ ಮುಂದಿನ ಭಾವಿಯಿಂದ ನೀರೆಳೆದು ಮುಖ ತೊಳೆಯಲು ನೀರೊದಗಿಸಿಕೊಂಡ. ನಾನೂ ಕೈ ಕಾಲು ತೊಳೆದುಕೊಂಡೆ. ತಿಂಡಿ ತಿನ್ನಲು ಹೋಟಲಿಗೆ ಹೋದೆವು.

ನಾವು ಮನೆಗೆ ಹಿಂತಿರುಗಿದಾಗ ಎಂಟೂವರೆ ಗಂಟೆಯಾಗಿತ್ತು. ಹಾಸಿಗೆ ಸುತ್ತಿ ಕಸ ಹೊಡೆದಿತ್ತು.

"ಪ್ರಸನ್ನಾ" ಎಂದು ಕೂಗಿದ ಮಾವ.

"ಪ್ರಸನ್ನ ಬೇಕಾಗಿತ್ತೇ ? ಯಾಕೆ ?" ಎಂದರು ಅವನ ತಾಯಿ ಕೇಳಿದರು.

"ಪಾಠ ಹೇಳಿಸಿ ಕೊಳ್ಳಲು" ಎಂದ ಮಾವ.

"ತರಕಾರಿ ತರೋದಕ್ಕೆ ಮಾರ್ಕೆಟ್ಟಿಗೆ ಹೋದ"
ಮಾವ ನನ್ನ ಕಡೆಗೆ ತಿರುಗಿದ "ಹೇಳಿಕೊಡೋ ನಿನ್ನ ಪಾಠನ" ಎಂದ.

ಪ್ರಸನ್ನ ಒಂಬತ್ತೂವರೆಗೆ ಬಂದ. ಸ್ನಾನ ಮಾಡೋ ಪ್ರಸ್ಸಿ" ಎಂದರು ಅವನ ತಾಯಿ.

"ನಾನು ಊರಿಗೆ ಹೋಗುತ್ತೇನೆ" ಎಂದೆ ನಾನು. ಹತ್ತೂವರೆ ಗಂಟೆಗೆ ಹೊರಟು ಹನ್ನೆರಡು ಗಂಟೆಗೆ ಊರು ತಲುಪಿದೆ. ವರದಿ ಒಪ್ಪಿಸಲು ಶೀನಣ್ಣನ ಮನೆಗೆ ಹೋದೆ ಅವನಿನ್ನೂ ಮಲಗಿದ್ದ.

ಮನೆಗೆ ಹೋಗಿ ಊಟಮಾಡಿ ಕಾದಂಬರಿ ಓದುತ್ತಾ ಕುಳಿತಿದ್ದೆ. ನಿದ್ದೆಬಂತು.

ಮೂರು ಗಂಟೆಗೆ ಶೀನಣ್ಣ ನೀಲಕಂಠೇಶ್ವರನ ಪೂಜೆ ಮುಗಿಸಿಕೊಂಡು ಮನೆಗೆ ಹಿಂತಿರುಗುತ್ತಿದ್ದ. ನಮ್ಮ ಮನೆಯ ಮುಂದೆ ನಿಂತು ಒಂದು ಕೂಗು ಹಾಕಿದ. ನನಗೆ ಎಚ್ಚರವಾಗಲಿಲ್ಲ. ಮನೆಯೊಳಕ್ಕೆ ಬಂದ. ಕೂಗಿ ಆರ್ಭಟಿಸಿ ನನ್ನನ್ನು ಎಬ್ಬಿಸಿದ.

"ಏನೋ ಆಗಲೇ ಬಂದು ಬಿಟ್ಟೆಯಾ ?"

"ಕೆಲಸವಾದಮೇಲೆ ಅಲ್ಲೇಕಿರಲಿ ಬಂದುಬಿಟ್ಟೆ."

"ಹ್ಯಾಗೆ ನಮ್ಮ ಪ್ರಸ್ಸಿ !"

"ಘನವಾದಿ !"

"ಏನಾದರೂ ಆದಾನೋ ?"

"ಖಂಡಿತವಾಗಿಯೂ !"

"ಪರವಾಗಿಲ್ಲ ತಾನೇ ?"

"ಪರವಾಗಿಲ್ಲ ಏನೂ ಅಡ್ಡಿ ಇಲ್ಲ"

"ಏನೋ ಒಂದು S. S. L. C. ಆಗಿ ದಾರಿಗೆ ಹತ್ತಿದರೆ"

"ಹತ್ತುತ್ತಾನೆ ದಾರೀನ. ಚಿಂತೆ ಮಾಡಬೇಡ"

"ಎಲ್ಲಾ ದೈವದ ಕೃಪೆ ನೋಡು."

"ಹೌದು ಶೀನಣ್ಣ ಅವನಿಲ್ಲದೆ ಒಂದು ಹುಲ್ಲು ಕಡ್ಡಿಯೂ ಚಲಿಸಲಾರದು.

"ಇವತ್ತು ಯಾವ ತಿಥಿ"

"ಇವತ್ತು ಇಂಗ್ಲೀಷಿನ ತಿಥಿ"

"ಶುದ್ಧ ಹುಡುಗಾಟ. ಪಂಚಾಂಗ ತೆಗೆದುಕೋ."

"ಹೋಗಿ ಊಟಮಾಡು ಶೀನಣ್ಣ ತಿಥಿಗಿಥಿ ಸಂದ್ಧಿ ಈಗ ಯಾಕೆ."

ಪಂಚಾಂಗ ತೆಗೆದುಕೊಂಡ ಶೀನಣ್ಣ "ಇವೊತ್ತು ಪಂಚಮಿ, ನಾಳೆ ಷಷ್ಠಿ ಗುರುವಾರ ಅಷ್ಟಮಿ ಶುಕ್ರವಾರ ನವಮಿ ಪಂಡರ ಹಳ್ಳಿಯಲ್ಲಿ ಪಾಂಡರಂಗ ಸ್ವಾಮಿಯು ರಥೋತ್ಸವ. ಸರೀ ಎಲ್ಲರೂ ದುರ್ಗದಲ್ಲೇ ಇದ್ದಾರೆ ಅಲ್ಲಿಂದ ಗುರುವಾರ ಸಂಜೆ ಬಸ್ಸಿಗೆ ಹೋದರಾಯ್ತು. ಮನೆ ದೇವರ ರಥೋತ್ಸವಕ್ಕೆ ಇದುವರೆಗೂ ಹೋಗಿಲ್ಲ" ಎಂದ.

"ಮತ್ತೆ ಪ್ರಸನ್ನ ?"

"ಅವನೂ"

"ಪರೀಕ್ಷೆ ಗತಿ ?"

"ದೇವರ ಕೃಪೆಯಿದ್ದರೆ ಪರೀಕ್ಷೆ ಏನು ಮಹಾ !"

(ಸಶೇಷ)

ಚೆಲುವೆ

ಮಾತು : ನವ್ಯ ಕವಿತೆಯು ಹಾಗೆ
(ಅರ್ಥವಾಗದು ನಿಮಗೆ !)
ನಿಲುವು ; ನವ್ಯ ಚಿತ್ರದ ಹಾಗೆ !
ಗುಲ್ಲೂರಿನೊಳಗೆಲ್ಲ ಅವಳೆ ಬಲು ಚೆಲುವೆ.
ಇದ್ದರೂ ಮುಖತುಂಬ ಮೊಡವೆ !
(ಮೊಡವೆ—ಪ್ರಾಯದ ಒಡವೆ.)

—ಕಿರಣ ಗುಲ್ಲೂರು

ಎಲ್. ಸಿ. ಎಂ. ಲಕ್ಷ್ಮಣರಾಯ

ಕುಳ್ಳ ಅಂದರೆ ಕುಳ್ಳ ಲಕ್ಷ್ಮಣರಾಯ. ಮಾಸ್ತರ್ ಕುಲಕರ್ಣಿಯವರ ಮನೇಲಿ ಆರನೆ ಮಗುವಿನ ಮೊದಲ ಹುಟ್ಟಿದ ಹಬ್ಬ ಮಾಡಿದಾಗ ನಾನೂ ಹೋಗಿದ್ದೆ. ಬಡವರ ಮನೆ ಊಟ. ಐಶ್ವರ್ಯವಂತರ ಮನೆ ಊಟ ಅಂತ ಗಾದೆ ಕೇಳಿಲ್ಲವೇ ? ಮಾಸ್ತರ ಹೆಂಡತೀದೆ ಅಡಿಗೆ. ಪಳಗಿದ ಕೈ. ಬಲು ರುಚಿಯಾಗಿರುತ್ತೆ ಊಟ ಇದು ಎಲ್ಲರೂ ತಿಳಿದ ವಿಷಯ. ಅದಕ್ಕೇನೇ ಕರೆಸಿಕೊಂಡವರಲ್ಲಿ ಒಬ್ಬರೂ ತಪ್ಪದೆ ಹಾಜರಾಗಿದ್ದರು.

ಅದೇ ಮೊದಲ ಸರ್ತಿ ಲಕ್ಷ್ಮಣರಾಯನ್ನ ನಾನು ಕಂಡಿದ್ದು. ಕುಳ್ಳ ಅಂದರೆ ಕುಳ್ಳ. ನೋಡಿದವರ ಕಣ್ಣಿಗೆ ಅವನ ಕುಳ್ಳತನ ರಾಹು ಬಡಿದಂತೆ ಕಾಣಿಸುತ್ತಿತ್ತು. ನಾನಾಗಿ ಮೇಲೆ ಬಿದ್ದು ಅವನ ಪರಿಚಯ ಮಾಡಿಕೊಂಡೆ. ಅದೆಂತಹ ಧ್ವನಿ ಅವನದು ಅಂತ ! ಕಂಚು ಬಾರಿಸಿದ ಹಾಗೆ ಅವನ ಧ್ವನಿ. ಎಲ ಎಲಾ ಈ ಪುಟಾಣಿ ದೇಹದಲ್ಲಿ ಇಂತಹ ರಂಢೋಲ್‌ನಾದ ಹೇಗೆ ಹೊರಟಿತು ? ಎಂದು ಎಲ್ಲರಂತೆ ನಾನೂ ಅಚ್ಚರಿಗೊಂಡೆ ಅಗೂ ಇದೂ ಮಾತನಾಡಿ, ಊಟಕ್ಕೆ ಕುಳಿತೆವು.

ಮಾಸ್ತರ ಹೆಂಡತಿ ಮಾಡಿ ಬಡಿಸಿದ ಊಟ ಮಾಡುವಾಗ, ಎಲ್ಲರೂ ತದೇಕ ಚಿತ್ತದಿಂದ ಇರುತ್ತಾರೆ ತೊಟ್ಟಿಲು ತೂಗಿದ ಕೈ ಕಟ್ಟಳೆ ಅಡಿಗೆ ಮಾಡಿಟ್ಟರೆ ಅದನ್ನು ಸವಿಯುಕ್ಕೆ ಪುಣ್ಯ ಇರಬೇಕು ನನಗಂತೂ ಅವರ ಮನೇಲಿ ಉಂಡಾಗಲೆಲ್ಲ, ಬರಬಾರದ ಯೋಚನೆಗಳೇ ಮನಸ್ಸಿನಲ್ಲಿ ಬರುತ್ತೆ. ಹಗಲುಗನಸು ಬೀಳುತ್ತೆ. ಈಕೇನ ನಾನೇನಾದರೂ ೨೦ ವರ್ಷಗಳ ಹಿಂದೆ ಮದುವೆ ಮಾಡಿಕೊಂಡಿದ್ದರೆ, ದಿನದಿನವೂ ಈ ಊಟ ಮಾಡಬಹುದಾಗಿತ್ತಲ್ಲ. ಎಂತಹ ಸ್ವರ್ಗಜೀವನವಾಗುತ್ತಿತ್ತು ಆಗ. ಬಾಳು ಸಾರ್ಥಕವಾಗುತ್ತಿತ್ತು. ಎಂದೆಲ್ಲ ಯೋಚನೆಗಳು ಬರುತ್ತೆ. ನನಗೂ ಗೊತ್ತು ಇನ್ನೊಬ್ಬರ ಮನೇಲಿ ಊಟಮಾಡಿ, ಅವರ ಮನೆ ಉಪ್ಪು ಉಂಡು, ಆ ಮನೆಯಾಕೆಯನ್ನೇ ಮಡದಿಯನ್ನಾಗಿ ಮನಸ್ಸಿನಲ್ಲಿ ಆಸೆ ಪಡುವುದು ತಪ್ಪು ಅಂತ. ಆದರೂ ಅದೇಕೋ ನನ್ನ ಹತೋಟಿ ಮೀರಿ, ಮನಸ್ಸಿನ ಆಳದಿಂದ ಇಂತಹ ಸಾಧ್ಯವಾಗದ ಆಸೆಗಳು ಚಿಮ್ಮಿಕೊಂಡು ಬಂದು ತೇಲಾಡುತ್ತವೆ.

ಈ ಗಲಾಟೆಯಲ್ಲಿ ಲಕ್ಷ್ಮಣರಾಯನನ್ನು ಮಾತನಾಡಿಸದೆ ಇದ್ದುದು ಸಹಜ.

* * * *

ಎರಡನೆ ಸಲ ಲಕ್ಷ್ಮಣರಾಯನನ್ನು ಕಂಡಿದ್ದು, ಸಾಹುಕಾರ್ ಚನ್ನಪ್ಪನವರ ಮನೆಯಲ್ಲಿ. ದಿಳ್ಳಿಯಿಂದ ಯೋಜನಾಸಮಿತಿಯ ಅಧ್ಯಕ್ಷರು ನಮ್ಮೂರಿಗೆ ಬಂದಿದ್ದಾಗ, ಸಾಹುಕಾರ್ ಚನ್ನಪ್ಪನವರು ಅವರ ಗೌರವಾರ್ಥ ಒಂದು ಸಂತೋಷ ಕೂಟವನ್ನು ಏರ್ಪಡಿಸಿದ್ದರು. ಹೋದಕೂಡಲೆ ಚನ್ನಪ್ಪನವರು ನನ್ನನ್ನು ಸ್ವಾಗತಿಸಿ. ಇತ್ತ ಅತ್ತ ನೋಡಿದರು. ಲಕ್ಷ್ಮಣರಾಯ ಅವರ ಕಣ್ಣಿಗೆ ಬಿದ್ದ. ಅವನನ್ನು ಅವರ ದಿಂದ ಕರೆದು. ನನ್ನ ಪರಿಚಯ ಮಾಡಿಸಿ, " ಇವರನ್ನು ನೋಡಿಕೋಪ್ಪ " ಎಂದು ಅವನಿಗೆ ಹೇಳಿದರು,

ಸಾಹುಕಾರ ಮನೆ ಅತಿಥ್ಯ ಕೇಳಬೇಕೆ ? ಬೆಳ್ಳಿ ತಟ್ಟೆ, ಗಾಜಿನ ಲೋಟ, ಸರಿಗೆ ಸೀರೆ, ಕಿಂಕಾಬಿನ ತುಂಬಿದ ರವಿಕೆ, ಕಿಣಿ ಕಿಣಿ. ಗಿಲಗಿಲ, ಗಲಗಲ.

ಒಂದನಕ ಒಪ್ಪಿಕೊಳ್ಳಬೇಕು ಊಟಕ್ಕೆ ಮುಂಚೆ ಸಾಹುಕಾರರ ಮನೆಯಲ್ಲಿ ಸರಬರಾಜಾಗುವ ಸಂತರ್ಪಣೆಯಿಂದ, ಅವರು ಏನು ಊಟಕ್ಕೆ ಹಾಕಿದರೂ ಮಜವಾಗಿರುತ್ತೆ, ಚಿರೋಟಿಗೆ ಒಬ್ಬ ಅತಿಥಿ ಉಪ್ಪಿನಕಾಯಿ ರಸ ಕಲಸಿ ವ್ಹಾ ವ್ಹಾ ಅಂತ ಮಜವಾಗಿ ಮೆಲ್ಲುತ್ತಿದ್ದ. ಸಾರನ್ನಕ್ಕೆ ಲಾಡು ನಂಜಿಕೊಂಡು ತಿಂದವನನ್ನು ನೋಡಿದೆ. ಪೋಲಿ ದನ ಕಂಡವರ ಮನೇಲಿ ಸೊಪ್ಪುಸದೆಯನ್ನು ಗಬಗಬ ಅಂತ ಮೇಯಲ್ಲವೆ. ಹಾಗೆ ಜನ ಮೇಯುತ್ತಾ ಇರುತ್ತಾರೆ, ಸಾಹುಕಾರರ ಮನೆಯಲ್ಲಿ.

ಈ ಎಲ್ಲಾ ಲೋಟ, ನೋಟಗಳ ಅವಾಂತರದಲ್ಲಿ ಲಕ್ಷ್ಮಣರಾಯನ ಹತ್ತಿರ ಮಾತನಾಡುಕ್ಕೆ ಎಲ್ಲಿ ಸಾಧ್ಯ ? ಯಾರಿಗೆ ಬೇಕಾಗಿತ್ತು?

* * * *

ಪಂಚಾಪಕೇಶ ಐಯ್ಯರ್ ನಮ್ಮನೆಗೆ ಒಂದು ಸಂಜೆ ಬಂದರು. ಕಣಿವೆ ಕೆಳಗಿನವರು. ಘಟ್ಟ ಹತ್ತಿ ನಮ್ಮೂರಿಗೆ ಬಂದು 20 ವರ್ಷಗಳಾಗಿದ್ದರೂ, ಅವರ ಕನ್ನಡ ಮಾತಿಗೆ ತಮಿಳಿನ ಛಾಯೆ ಡಿಖಾವಾಗಿಯೇ ಇತ್ತು. " ಭಾಗೀರಥಿಬಾಯಿ ನಮ್ಮೂರಿಗೆ ಬಂದಾಳೆ. ಮೊನ್ನೆ ತಾನ ಆಕೆ ಸಂಗೀತಾನ ಮೆಚ್ಚಿ ದಿಳ್ಳೀಲೆ ಬದ್ಮಾಶ್ರೀ ಟೈಟಲ್ ಕೊಡುತ್ತಾರೆ. ನಮ್ಮನೆಗೆ ಊಟಕ್ಕೆ ನಾಳೆ ರಾತ್ರಿ ಬರಲೇಬೇಕು. ಭಾಗೀರಥಿ ಬಾಯಿಾನೂ ಬರ್ತ್ತಾಳು " ಅಂತ ಆತ ಕರೆದ.

ಪದ್ಮಶ್ರೀ ಭಾಗೀರಥಿಬಾಯಿ, ಇವನ ಬಾಯಿಗೆ ಬಿದ್ದು ಬದ್ಮಾಶ್ರೀ ಆಗಬೇಕಾದರೆ ಆ ತರಹ ಗುಣ ಏನಾದರೂ ಆಕೀಲಿ ಇದೆಯೋ, ನೋಡೇಬಿಡೋಣ. ಹಾಗೂ ಅವಿಯಲ್ಲು. ತಮಿಳು ಸಾರು, ಅಂದರೆ ನನಗೆ ಸ್ವಲ್ಪ ಪ್ರೀತಿ. ಆದ್ದರಿಂದ ಅವರ ಮನೆಗೆ ಊಟಕ್ಕೆ ಹೋದೆ. ಎರಡಂಗುಲ ಸರಿಗೆ ಪಂಚೇನ ದಟ್ಟಿ ಉಟ್ಟುಕೊಂಡು ಸಿಲ್ಕ್ ಜುಬ್ಬಾ ಧರಿಸಿ, ಅಂಗವಸ್ತ್ರವನ್ನು ಹೆಗಲ ಮೇಲೇರಿಸಿ, ಹೋದೆ.

ನಾನೂ ಹೋಗುವ ಹೊತ್ತಿಗೂ ಭಾಗೀರಥಿಬಾಯಿ ಬರುವುದಕ್ಕೂ ಒಂದೇ ಸಮಯವಾಯಿತು. ಇಬ್ಬರನ್ನೂ ಪಂಚಾಪಕೇಶ ಐಯ್ಯರ್ ಸ್ವಾಗತಿಸಿ. ಆಕೆಯನ್ನ ಕರೆದುಕೊಂಡು ಒಳಕ್ಕೆ ಗಡಗಡ ನಡೆದುಹೋದರು ನನ್ನ ಕರಕೊಂಡು ಹೋದವನು ?—ಹೇಳಬೇಕೆ ?—ನೀವು ಊಹಿಸಿದಂತೆ ಲಕ್ಷ್ಮಣರಾಯ.

ಸುಮಾರು ಜನ ತಮಿಳಿನಲ್ಲಿ ಮಾತನಾಡುತ್ತಿದ್ದರು. ನಮ್ಮಲ್ಲಿ ಜ್ವರ ಬಂದು ಸನ್ನಿ ಬಡಿದವರು ಬಡಬಡಿಸುವುದಿಲ್ಲವೇ ? ಅಲ್ಲಿಗೆ ಬಂದಿದ್ದವರು ಆರೋಗ್ಯವಾಗಿದ್ದಾಗ, ಆವೇಶದಲ್ಲಿ ಮಾತನಾಡಿದಾಗ. ಅದೇ ತರಹ ಬಡಬಡಿಸಿದಹಾಗೆ ಕೇಳಿಸಿತು. ಈ ಧ್ವನಿವರ್ಧನೆಗೆ ಗೌರಿಶಂಕರದಂತಿದ್ದ ಲಕ್ಷ್ಮಣರಾಯನ ಮಾತು ಎದ್ದು ನಿಂತು ಕೇಳಿಸುತ್ತಿತ್ತು.

ತಮಿಳಿನಲ್ಲಿ ತಿಳಿದವರು ಮಾತನಾಡಿದರೆ ತಾಳಬದ್ಧವಾಗಿಯೇ ಇರುತ್ತೇನೋ ? ಬಂದವರ ಬಡಬಡಿಸುವುದಕ್ಕೆ ಬದ್ಧಾಶ್ರೀ ಭಾಗೀರಥಿಬಾಯಿ ತಾಳ ಹಾಕುತ್ತಾ ಇದ್ದಳು. ಒಮ್ಮೆಯಾದರೂ ತಾಳ ತಪ್ಪಲಿಲ್ಲ ಆ ಕಾರಣದಿಂದಲೇ ತಮಿಳಿನವ ಜೊಲ್ಲಿನ ಹನಿ ಹನಿಯಲ್ಲೂ ಸಂಗೀತ ಹೊರಹೊಮ್ಮುತ್ತಿರುತ್ತದೆ.

ಈ ಎಲ್ಲಾ ಪವಿತ್ರ ಸ್ಥಾನದಲ್ಲಿ, ಲಕ್ಷ್ಮಣರಾಯನ ಹತ್ತಿರ ಹೆಚ್ಚು ಮಾತಾಡಲೂ ಆಗಲಿಲ್ಲ. ಬಹಿರಂಗವಾಗಿ ಉಚ್ಚರಿಸಬಾರದ ಕೆಲವೇ ತಮಿಳು ಮಾತುಗಳನ್ನು ಬಲ್ಲ. ನನ್ನಂತಹನೊಂದಿಗೆ ಲಕ್ಷ್ಮಣರಾಯ ಯಾಕಾರೂ ಮಾತನಾಡಾನು ?

* * * *

ನನಗೆ ಯೋಚನೆಗಿಟ್ಟುಕೊಂಡಿತು. ಈ ಲಕ್ಷ್ಮಣರಾಯ ಯಾರು ? ಯಾರ ಮನೆಗೆ ಹೋದರೂ ಇವ ಸಿಕ್ಕುತ್ತಾನೆ ? ಬಡವರ ಮನೆಯಾಗಲಿ, ಸಾಹುಕಾರರಾಗಲಿ, ಕಲಾರಾಧಕರಾಗಲಿ, ಎಲ್ಲಿ ಹೋದರೂ ಇವನೂ ಹಾಜರು ? ಏನಿರಬಹುದು ಇದರ ಮರ್ಮ ? ಮಂತ್ರಿಗಳ ಕಡೆ ಭಾವಮೈದ ನಾನು. ವಿಮಾ ಏಜೆಂಟನಾಗಿದ್ದರೂ, ಜನ ನನ್ನನ್ನು ಆದರದಿಂದ ಸ್ವಾಗತಿಸುತ್ತಾರೆ. ನಮ್ಮ ಅಕ್ಕನಿಗೆ ನನ್ನ ಮೇಲೆ ಬಲು ಪ್ರೀತಿ. ಭಾವನಿಗೆ ಅಕ್ಕನ ಹತ್ತಿರ ಬಲು ಭಯ. ಅಂದಮೇಲೆ, ಭಾವ ನನ್ನ ಮಾತಿಗೆ ಸೈಗುಟ್ಟುತ್ತಾರೆ, ಅಂತ ಜನರಿಗೆ ಗೊತ್ತು. ಕಾರ್ಯಾರ್ಥಿಗಳು ನನ್ನ ಕಾಲನ್ನು ಹಿಡಿಯುತ್ತಾರೆ. ಅದರಿಂದಲೇ ಅಲ್ಲಿ ಇಲ್ಲಿ ಆದ ಕೂಟಗಳಿಗೆ ನಾನು "ಅಗತ್ಯ ಅತಿಥಿ" ಆದರೆ ಈ ಲಕ್ಷ್ಮಣರಾಯ ಯಾರು ? ಇವರ ಅಕ್ಕ ಇವನ ಹಾಗೇ ಕುಳ್ಳಾಗಿದ್ದರೆ, ಯಾವ ಮಂತ್ರಿ ತಾನೆ ಮದುವೆ ಮಸಲಾ ಆಗಿದ್ದರೂ ಅಂತಹ ಕುಳ್ಳಿಗೆ ಹೆದರುತ್ತಾನೆ ? ಅಥವಾ ಇವನ ಹೆಂಡತಿ ಅಣ್ಣ ನಾದರೂ ಮಂತ್ರಿ ಗಿಂತ್ರೀನೋ ? ಹೇಳಲಿಕ್ಕೆ ಬರಲ್ಲ. ಮಂತ್ರಿಗಳ ಸಂಖ್ಯೆಯೋ ಅಶ್ವತ್ಥ

ಪ್ರದಕ್ಷಿಣೆಗೆ ಹಾಕೋತರಹ ಇದೆ. ಯಾರು ಯಾರು ? ಎಲ್ಲಿ ? ಏಕೆ ? ಎನ್ನುವುದು ಸರಕಾರಕ್ಕೂ ಸರಿಯಾಗಿ ತಿಳಿಯದೆ ಇರಬಹುದು. ಆದ್ದರಿಂದ ಲಕ್ಷ್ಮಣರಾಯನ ಮೂಲ ಕಂಡುಹಿಡಿಯಬೇಕು ಎಂದುಕೊಂಡೆ.

ಆದೇನು ಗ್ರಹ ಗತಿನೋ ? ಆ ಹೊತ್ತಿಗೆ ಸರಿಯಾಗಿ ಬಸಪ್ಪ ಮನೆಗೆ ಬಂದ. ಮನೆತೋಟದಲ್ಲಿ ಬೆಳೆದಿದ್ದ ತರಕಾರೀನ ಅಕ್ಕ ಕಳಿಸಿಕೊಟ್ಟಿದ್ದಳು. ಅದನ್ನು ತಂದು ಕೊಟ್ಟ. ತುಂಬಾ ಥ್ಯಾಂಕ್ಸ್ ಅಪ್ಪ. ಅಕ್ಕನಿಗೆ ಇಲ್ಲಿ ಎಲ್ಲ ಚೆನ್ನಾಗಿದ್ದಾರೆ ಅಂತ ಹೇಳು ಅಂತ ಹೇಳಿ ಬಾಗಿಲುತನಕ ಕರೆದುಕೊಂಡು ಹೋಗಿಬಿಟ್ಟೆ.

"ದಿನಾ ದಿನಾ ಇಷ್ಟೆಲ್ಲಾ ಪುಕಟ್ಟು ತರಕಾರಿ ತಿಂದೋವರು ಚೆನ್ನಾಗಿಯೇ ಇರ್‍ತಾರೆ ಅಂತ ಡಾಕ್ಟರು ಅಮ್ಮಾವರಿಗೆ ಹೇಳ್ತಾ ಇರ್‍ತಾರೆ. ಅದಕ್ಕೆ ಸ್ವಾಮಿ ನಿಮ್ಗೆ ನೇಗೂ ಅಮ್ಮಾವರು ಕಳಿಸಿಕೊಡೋದು" ಎಂದ ಬಸಪ್ಪ. ಬಸಪ್ಪಾ ಮಾತಾಡಿದರೆ ಬಾಲದಲ್ಲೇ ಬತ್ತಿ ಹೊತ್ತಿಸಿ ಮಾತಾಡ್ತಾನೆ. ಎದುರುಮಾತಿಗೆ ಅವಕಾಶವೇ ಇಲ್ಲ ಮನಸ್ಸೇನೋ ಕಸಿವಿಸಿಯಾಗಿತ್ತು.

ನನ್ನ ಪುಣ್ಯ ! ಅಷ್ಟು ಹೊತ್ತಿಗೆ ರಸ್ತೇಲಿ ಲಕ್ಷ್ಮಣರಾಯ ಹೋಗ್ತಾ ಇದ್ದುದು ಕಾಣಿಸಿತು. "ಯಾರು ಬಸಪ್ಪ ! ಆತ. ಆಗಾಗ್ಗೆ ಸಿಕ್ತಾ ಇರ್‍ತಾನೆ" ಎಂದು ಕೇಳಿದೆ. ಅವನಾ ಎಲ್. ಸಿ. ಎಂ. ಲಕ್ಷ್ಮಣರಾಯ Least common multiple ಎಲ್ಲರ ಮನೇಲೂ ಅವನದೂ ಅಗತ್ಯ ಹಾಜರಿ. ಜಾತಕ ನೋಡಿ ಫಲ ಹೇಳ್ತಾನೆ. ಮಾಟ ಮಂತ್ರ ಮಾಡಿಸ್ತಾನೆ ಸಾಹೇಬರ ಹತ್ತಿರವೂ ಒಂದು ಸಲ ಬಂದಿದ್ದ. ಅವನು ಹೇಳಿದ್ದು ನಡೀಲಿಲ್ಲ ಅಂತ ಸಾಹೇಬರು ಈಗ ಹತ್ತಿರ ಸೇರುಸಲ್ಲ." ಅಂತ ಬಸಪ್ಪ ಹೇಳಿದ.

ಲಕ್ಷ್ಮಣರಾಯ ಎಲ್. ಸಿ. ಎಂ. ಆದರೆ ನಾನು ಜಿ. ಸಿ. ಎಫ್. ಏನೋ Greatest Common Factor ಓ ಎನ್ನಿಸಿತು.

"ಪ್ರಸಾದ್"

ರಾಜವಿದ್ಯಾ ರಾಜಗುಹ್ಯ

ಕಳೆದ ಮಳೆಗಾಲದಲ್ಲಿ ಇಂಡಿಯನ್ ಆರ್ಮಿಯ ಜನರಲ್ ಕೆಂಪಯ್ಯನವರು (ಇವರು ಅಚ್ಚ ಕನ್ನಡಿಗರು) ದಕ್ಷಿಣ ವ್ಹಿಯೆಟ್‌ನಾಮಿಗೆ ಗುಪ್ತ ಸಂದರ್ಶನವಿತ್ತ ವಿಷಯ ಯಾವ ಪತ್ರಿಕೆಗಳಲ್ಲಿಯೂ ಪ್ರಕಟಗೊಳ್ಳಲಿಲ್ಲವಾದ ಕಾರಣ ಅದು ನಿಮಗೆ ಗೊತ್ತಿರದಿದ್ದರೆ ವಿಸ್ಮಯವೇನಿಲ್ಲ. ಈ ವಿಷಯ ನನಗೆ ಸುಂದಾಪುರದ ಡಿ. ಎಸ್. ಪಿ. ಯವರಾದ ಶ್ರೀಮಾನ್ P.U.C ಆಚಾರ್ ಅವರ ಕುಕ್ಕು ಪೆದ್ದಂಭಟ್ಟನಿಂದ ತಿಳಿಯಿತು ಪೆದ್ದಂಭಟ್ಟನ ಹೇಳಿಕೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ನಮಗೆ ಇದು ರಾಜವಿದ್ಯಾ ರಾಜಗುಹ್ಯವೆಂಬುದರ ಅರಿವಾಗಿ, ದಕ್ಷಿಣ ವ್ಹಿಯೆಟ್‌ನಾಮಿನಲ್ಲಿ ಅಮೇರಿಕದವರು ಪದೇ ಪದೇ ಏಕೆ ಸೋಲುತ್ತಿದ್ದಾರೆ ಎಂಬ ಒಗಟಿಗೆ ಸತರ್ಕವಾದ ಅನುಮಾನವನ್ನು ಕಲ್ಪಿಸಿಕೊಳ್ಳಲು ಅದು ನಮ್ಮನ್ನು ಪ್ರೇರೇಪಿಸಿತು. ಈ ರಾಜವಿದ್ಯಾ ರಾಜಗುಹ್ಯದ ವಿವರಗಳನ್ನು ಕೊರವಂಜಿಯ ವಾಚಕರಿಗೆ ಬಹಿರಂಗಪಡಿಸುವಾಗ ಭಗವಾನ್ ಶ್ರೀ ಕೃಷ್ಣಪರಮಾತ್ಮನು ಗೀತೆಯ ಒಂಬತ್ತನೆಯ ಅಧ್ಯಾಯವನ್ನು ಹೇಳುವಾಗ ಯಾವ ಅಭಿಮಾನವನ್ನು ಪ್ರಕಟಗೊಳಿಸಿದನೋ ಅದರ ಅನುಭವವು ನಮಗೂ ಈಗ ಆಗುತ್ತಿದೆ.

ಜ॥ ಕೆಂಪಯ್ಯನವರು ಸಾಯಗಾಂವನಲ್ಲಿ ಮೇಜರ್ ಜನರಲ್ ಬ್ಲಡ್‌ರವರನ್ನು ಕಂಡು ಅಮೇರಿಕದವರು ವ್ಹಿಟ್‌ಕೊಂಗ್ ಗೇರಿಲ್ಲಾಗಳನ್ನು ಹೇಗೆ ಗುರುತಿಸಿ ಹಿಡಿಯುತ್ತಾರೆ ಎಂಬ ವಿಷಯವನ್ನು ತಿಳಿಸಬೇಕಾಗಿಯೂ, ಚೀನೀಯರಿಂದ ಇದೇ ರೀತಿಯ ತೊಂದರೆಯನ್ನು ಎದುರಿಸುವ ಪ್ರಸಂಗ ಬಂದರೆ ಭಾರತೀಯರಿಗೆ ಅಮೇರಿಕದವರ ಅನುಭವಗಳು ಯೋಗ್ಯಪಾಠ ಕಲಿಸಬಲ್ಲವೆಂದೂ, ವಿನಂತಿಸಿಕೊಂಡರು. ಮೇ॥ ಜ॥ ಬ್ಲಡ್‌ರವರು ಟೆಕ್ಸಾಸ್ ನಗೆಯನ್ನು ನಕ್ಕು "Hey, come along then. I 'll show you the fun." ಎಂದು ಜ॥ ಕೆಂಪಯ್ಯನವರನ್ನೂ ತಮ್ಮ ಅಲ್ಶೇಶಿಯನ್ ನಾಯಿಯನ್ನೂ ಸಾಯಗಾಂವಿನ ಈಶಾನ್ಯಕ್ಕೆ ಹನ್ನೊಂದು ಕಿಲೋಮೀಟರಿನ ಅಂತರದಲ್ಲಿದ್ದ ವ್ಹಿಟ್‌ಕೊಂಗ್ ಸ್ಟ್ರಾಂಗ್ ಹೋಲ್ಡಿಗೆ ಕರೆದುಕೊಂಡು ಹೋದರು. ಅಲ್ಲಿ ಭತ್ತದ ಗದ್ದೆಗಳೂ ದಟ್ಟವಾದ ಕಾಡೂ ಒಂದನ್ನೊಂದು ಅಪ್ಪಿಕೊಂಡು ನಿಂತಿದ್ದವು. ಮಳೆ ಜಿನುಗುತ್ತಿತ್ತು. ಸುಂಯ್ ಎಂದು ಗಾಳಿ ಬೀಸುತ್ತಿತ್ತು. ಶಾಂತಿಪ್ರಿಯರಾದ ವ್ಹಿಯೆಟ್‌ನಾಮ ರೈತರು ಭತ್ತದ ಗದ್ದೆಗಳಲ್ಲಿ ನಾಟಿ ಇಡುತ್ತಿದ್ದರು

ಮೋ॥ ಜ॥ ಬ್ಲಡ್‌ರು ಜೀಪನ್ನು ನಿಲ್ಲಿಸಿ ಕೆಳಗಿಳಿದರು. ಜ॥ ಕೆಂಪಯ್ಯನವರು ಕೌತುಕ ದಿಂದಲೂ, ಅಲ್ಸೇಶಿಯನ್ನು ಆತುರದಿಂದಲೂ ಅವರನ್ನು ಅನುಸರಿಸಿ ಮುಂದೇನು ಎಂದು ನಿರೀಕ್ಷಿಸುತ್ತಿದ್ದಾಗ ಮೋ॥ ಜ॥ ಬ್ಲಡ್‌ರು ಎದುರಿಗಿನ ಭತ್ತದ ಗದ್ದೆಯಲ್ಲಿ ಇಳಿದು ಸ್ವಲ್ಪ ಕೆಸರನ್ನು ಕೈಯಲ್ಲಿ ತೆಗೆದುಕೊಂಡು ಬಂದರು. ಆ ಕೆಸರನ್ನು ಅಲ್ಸೇಶಿಯನ್ನಿನ ಮೂಗಿಗೆ ಮೂಸುತೋರಿಸಿ ಅದನ್ನು "ಛೂ" ಬಿಟ್ಟರು. ಆಲ್ಸೇಶಿಯನ್ನು ಚಂಗನೆ ನೆಗೆದು ಓಡುತ್ತ ಹೋಗಿ ಭತ್ತದ ಗದ್ದೆಯಲ್ಲಿ ನಾಟಿ ಇಡುತ್ತಿದ್ದ ಒಬ್ಬ ಹಣ್ಣು ಹಣ್ಣು ಮುದುಕಿಯ ಲಿಂಗವನ್ನು ಕಚ್ಚಿ ಗೆಲುತು ಮಾಡಿ ಮರಳಿ ತನ್ನ ಒಡೆಯನ ಹತ್ತಿರ ಓಡಿ ಬಂದಿತು. ಮೊ॥ ಜ॥ ಬ್ಲಡ್‌ರು ಮತ್ತೆ ಟೆಕ್ಸಾಸ್ ನಗೆ ನಕ್ಕು "Hay, look at the fun! That must be the foe! ಎಂದರು ಜ॥ ಕೆಂಪಯ್ಯನವರು ವಿಸ್ಮಯದಿಂದ "But…it is an old " ಎನ್ನುತ್ತಿದ್ದಾಗ ಅವರನ್ನು ಮಧ್ಯದಲ್ಲಿ ತಡೆದು " Hay that's how you are deceived. ಎಂದು ಪುನಃ ನಕ್ಕರು.

ಜ॥ ಕೆಂಪಯ್ಯನವರು ಭಾರತಕ್ಕೆ ವಾಪಸ್ಸಾಗುವಾಗ ಅಮೇರಿಕನ್ ಮಾದರಿಯ ಒಂದು ಆಲ್ಸೇಸಿಯನ್ ಕುನ್ನಿಯನ್ನು ಕಾಣಿಕೆಯಾಗಿ ಪಡೆದುಕೊಂಡು ಬಂದರು, ಪಾಲಂ ನಿಲ್ದಾಣದಲ್ಲಿ ಇಳಿಯುತ್ತಿದ್ದಾಗ ಅವರ ಕಿವಿಯಲ್ಲಿ " Give him half cooked beef with no salt," ಎಂಬ ಮೋ॥ ಜ॥ ಬ್ಲಡ್‌ರವರ ವಾಕ್ಯ ಕಡಜೀರಗಿಯ ಹುಳದ ಕರ್ಕಶನಿನಾದವನ್ನು ಮಾಡುತ್ತಿತ್ತು. ಮನೆಗೆ ಬಂದು ಈ ವಿಷಯವನ್ನು ಅವರು ತಮ್ಮ ಧರ್ಮಪತ್ನಿಗೆ ತಿಳಿಸಿದಾಗ " Beef! Impossible! " ಎಂದು ಉದ್ಗರಿಸಿ ಅವರು ಅಮೇರಿಕನ್ ಗೋಧಿಯ ಹಳಸಿದ ಚಪಾತಿಯನ್ನು ಹಾಲಿಮಜ್ಜಿಗೆಯಲ್ಲಿ ನೆನೆಸಿ ತಿನಿಸಿದರು. ಅದಕ್ಕೆ 'ಹನುಮಾನ್' ಎಂದು ಹೆಸರಿಸಿ ಪ್ರೀತಿಯಿಂದ 'ಹನಿ' ಎಂದು ಕರೆದುದೂ ಆಯಿತು. ಒಂದು ತಿಂಗಳು ಕಳೆಯುವದರಲ್ಲಿಯೇ 'ಹನಿ'ಯು ಆಲ್ಸೇಸಿಯನ್ ಮರಿಯೋ, ಮಂಗನ ಮರಿಯೋ ಎಂಬುದು ಕೂಡ ತಿಳಿಯದಷ್ಟು ರೂಪ ಬದಲಾಯಿಸಿಕೊಂಡಿತು. ಇದನ್ನು ನೋಡಿ ಸಹಿಸಲಾರದೆ ಜ॥ ಕೆಂಪಯ್ಯನವರು ತಮ್ಮ ಹುಟ್ಟಿದೂರಿಗೆ ಬಂದಾಗ ರಾಜಧಾನಿಯಲ್ಲಿ ಐ. ಜಿ. ಪಿ. ಯವರನ್ನು ಸಂದರ್ಶಿಸಿ 'ಹನಿ'ಯ ಹಿಂಬದಿಯ ವೃತ್ತಾಂತವನ್ನೆಲ್ಲ ತಿಳಿಸಿ ಹೇಳಿ " Give him half cooked beef with no salt. ಎಂಬ ಸಲಹೆಯೊಡನೆ ಅದನ್ನು ಅವರಿಗೆ ಕಾಣಿಕೆಯಾಗಿ ಅರ್ಪಿಸಿ ಪ್ರಾಣಿದಯ ಸಂಘದವರ ಕಟುನೋಟದಿಂದ ಪಾರಾದರು.

ಐ. ಜಿ. ಪಿ. ಯವರು ದಾಕ್ಷಿಣ್ಯಕ್ಕೆ ಬಿದ್ದು ಆ ನಾಯಿಯನ್ನೇನೋ ಸ್ವೀಕರಿಸಿದರು. ಆದರೆ ಅದರ ಮುಖವನ್ನು ಮತ್ತೊಂದು ಸಲ ಚನ್ನಾಗಿ ನೋಡಿದ ನಂತರ ಅವರಿಗೆ ಅದರ ಹಿಂಬದಿಯ ವೃತ್ತಾಂತವು ದಿಟವೇ ಎಂಬ ಸಂಶಯವು ಹುಟ್ಟಿತು.

ಅವರಿಗೇಕೋ ಅದರ ಲಕ್ಷಣ ಸರಿತೋರಲಿಲ್ಲ. ಸುಂದಾಪುರದ ಡಿ. ಎಸ್. ಪಿ. ಯವರಾದ ಶ್ರೀಮಾನ್ P. U. C. ಆಚಾರ್‍ವರಿಗೂ ಐ. ಜಿ. ಪಿ ಯವರಿಗೂ ಆಗುತ್ತಿದ್ದಿಲ್ಲ. ಅವರು ಎಷ್ಟೋ ಸಲ " ಈ ಹಾರುವ ಪೋಲೀಸ್ ಇಲಾಖೆಗೆ ನಾಲಾಯಕ್ಕು. unproductive. " ಎಂದು ಆಚಾರ್‍ರ ಮಾನ ತೆಗೆದಿದ್ದರು. ರಾಜ್ಯದಲ್ಲಿ ಅತ್ಯಂತ ನಿರುಪದ್ರವಿ ಜಿಲ್ಹೆಯಾದ ಸುಂದಾಪುರಕ್ಕೆ ಆಚಾರ್‍ರನ್ನು ವರ್ಗ ಮಾಡಿಸಿದವರು ಈಗಿನ ಐ. ಜಿ. ಪಿ. ಯವರೇ. ಈ ಸಂದರ್ಭವನ್ನು ಉಪಯೋಗಿಸಿ ಐ. ಜಿ. ಪಿ. ಯವರು ಶ್ರೀಮಾನ್ ಆಚಾರ್‍ರವರಿಗೆ ಅಲ್ಸೇಸಿಯನ್ ಕುನ್ನಿಯ ಹಿಂಬದಿಯ ವೃತ್ತಾಂತವನ್ನು ಹೇಳಿ ಅದನ್ನು ಅವರಿಗೆ ಅರ್ಪಿಸಿ " Give him half cooked beef with no salt " ಎಂದು ಆಜ್ಞಾಪಿಸಿ ಕೈ ಜಾಡಿಸಿಕೊಂಡರು.

ಶ್ರೀಮಾನ್ P. U. C. ಆಚಾರ್‍ರವರು ಅಲ್ಸೇಶಿಯನ್ ಕುನ್ನಿಯನ್ನು ಮನೆಗೆ ಕರೆದುಕೊಂಡು ಹೋಗಿ ತಮ್ಮ ಅಡಿಗೆಯವನಾದ ಪೆದ್ದಂಭಟ್ಟನಿಗೆ ಅದರ ಪೂರ್ವ ವೃತ್ತಾಂತವನ್ನೆಲ್ಲ ನಿವೇದಿಸಿ "Give him half cooked beef with no salt. " ಎಂದು ಅದರ ಜವಾಬ್ದಾರಿಯನ್ನು ಅವನಿಗೆ ಒಪ್ಪಿಸಿದರು. ಪೆದ್ದಂಭಟ್ಟನಿಗೆ ದಿಗಿಲು ಇಟ್ಟುಕೊಂಡಿತು. ಬ್ರಾಹ್ಮಣರ ಮನೆಯಲ್ಲಿ ಗೋಮಾಂಸವೇ? ಅಮ್ಮಾವರಿಗೆ ಗೊತ್ತಾದರೆ ಏನೆಂದಾರು? ತಾನಾದರೂ ಗೋಮಾಂಸವನ್ನು ಕುಚ್ಚಿ ಯಾವ ನರಕಕ್ಕೆ ಹೋಗಬೇಕು? ಆದರೆ ಅವನು ಹೆಸರಿಗೆ ತಕ್ಕಂತೆ ಅಷ್ಟೊಂದು ಪೆದ್ದನಾಗಿರಲಿಲ್ಲ. " ಅಭಾವೇ ಶಾಲಿಚೂರ್ಣಂ " ಎಂಬ ವಾಕ್ಯವನ್ನನುಸರಿಸಿ ಅವನು ದಿನಾಲೂ 'ಹನಿ'ಗೆ ಎರಡು ಹೊತ್ತು ಅರೆ ಬೇಂದ ರಾಗಿಯ ಹಿಟ್ಟನ್ನು ತಿನ್ನಿಸಿದ. ಎಲ್ಲರ ಊಟವಾದ ಮೇಲೆ ಮಟ ಮಟ ಮಧ್ಯಾಹ್ನ ಅವನಿಗೆ ಸ್ವಲ್ಪ ವಿರಾಮ ಸಿಗುತ್ತಿತ್ತು. ಇದೇ ಸಮಯದಲ್ಲಿ ಅವನು 'ಹನಿ'ಗೆ ಡಿಟೆಕ್ಟಿವ್ ಟ್ರೈನಿಂಗ್ ಕೊಡುವ ಪರಿಪಾಠವನ್ನೂ ಇಟ್ಟುಕೊಂಡನು. ಡಿ. ಎಸ್. ಪಿ. ಯವರ ಮನೆಯಲ್ಲಿದುದರಿಂದ ಪೆಟ್ಟಂಭಟ್ಟನಿಗೆ ರಾಜಕೀಯ ಜ್ಞಾನ ಸಾಕಷ್ಟಿತ್ತು. ಪೋಲೀಸಿನವರ ಮೇಲೆ ಜನಜಂಗುಳಿ ಕಲ್ಲು ತೂರಿತು ಎಂಬ ವಿಷಯವನ್ನು ದಿನಾಲೂ ಅವನು ಪೇಪರಿನಲ್ಲಿ ಓದುತ್ತಿದ್ದ. ಆ ಮಂಕ ಇಂಥ ವ್ಯಕ್ತಿಯೇ ಕಲ್ಲು ತೂರಿತು ಎಂಬುದು ಪೋಲೀಸರಿಗೆ ಪತ್ತೇ ಆಗುತ್ತಿರಲೇ ಇಲ್ಲ. ಆದ್ದರಿಂದ ಅವನು 'ಹನಿ'ಗೆ ಯಾವ ಕಲ್ಲನ್ನು ಯಾವ ವ್ಯಕ್ತಿ ತೂರಿದನು ಎಂಬುದನ್ನು ಪತ್ತೆ ಹಚ್ಚುವ ಟ್ರೈನಿಂಗ್ ಕೊಡಲಾರಂಭಿಸಿದ.

ಕಳೆದ ಮಾರ್ಚಿ ತಿಂಗಳಲ್ಲಿ ಸುಂದಾಪುರದ ಕಾಲೇಜ ವಿದ್ಯಾರ್ಥಿಗಳು " ನಮಗೆ ಪರೀಕ್ಷೆ ಬೇಡ. " ಎಂದು ಮುಷ್ಕರ ಹೂಡಿ. ಪೋಲೀಸರ ಮೇಲೆ ಕಲ್ಲು ತೂರಿ 37 ಜನರನ್ನು ಗಾಯಗೊಳಿಸಿದ ವಿಷಯವನ್ನು ನೀವೆಲ್ಲ ಪತ್ರಿಕೆಗಳಲ್ಲಿ ಓದಿರುವಿರಿ. ಪೆದ್ದಂ

ಭಟ್ಟನ ಸಲಹೆಯಂತೇರೆಗೆ D. S. P. ಯವರಾದ ಶ್ರೀಮಾನ್ P. U. C. ಆಚಾರ್‌ರವರು ಕಲ್ಲು ತೂರಿದವರನ್ನು ಪತ್ತೇ ಹಚ್ಚಲು ಈ ಸಂದರ್ಭದಲ್ಲಿ ಹನಿಯು ಉಪಯೋಗ ಮಾಡಿದರು. ವಿದ್ಯಾರ್ಥಿಗಳು ಕಲ್ಲು ತೂರುತ್ತಿದ್ದರು. "ಹನಿ"ಯು ಆ ಆ ಕಲ್ಲುಗಳನ್ನು ಬಾಯಲ್ಲಿ ಕಚ್ಚಿಕೊಂಡು ಹೋಗಿ ಯಾವ ಅಮರಿಕ ವ್ಯಕ್ತಿ ತೂರಿದ್ದನೋ ಅವನ ಕೈಯಲ್ಲಿ ಕೊಟ್ಟು ಬರುತ್ತಿತ್ತು. ಆ ಕಲ್ಲುಗಳನ್ನು ವಿದ್ಯಾರ್ಥಿಗಳು ಪುನಃ ಪೋಲೀಸರ ಮೇಲೆ ತೂರುತ್ತಿದ್ದರು. "ಹನಿ"ಯು ತಾವು ತೂರಿದ ಕಲ್ಲುಗಳನ್ನು ಮರಳಿ ತಮಗೆ ತಂದುಕೊಡುತ್ತಿದ್ದುದರಿಂದ ಅವರಿಗೆ ಕಲ್ಲುಗಳಿಗಾಗಿ ತಡಕಾಡುವ ಸಂದರ್ಭವೇ ಬರಲಿಲ್ಲ. ಒಂದು ವೇಳೆ ಅಂದು "ಹನಿ" ಇರದಿದ್ದರೆ ಇಷ್ಟೊಂದು ಜನ ಪೋಲೀಸರು ಗಾಯಗೊಳ್ಳುತ್ತಿರಲಿಲ್ಲವೆಂದು ಜನರೂ ವಿದ್ಯಾರ್ಥಿಗಳೂ ಆಡಿಕೊಂಡರು. ಆದರೆ ಡಿ. ಎಸ್. ಪಿ. ಯವರೂ ಮತ್ತು ಅವರ ಕುಕ್ಕೂ ಆಲ್ಸೇಸಿಯನ್ನ ಕುನ್ನಿಯ ಬುದ್ಧಿ ಚಮತ್ಕಾರವನ್ನು ಹೊಗಳಿದ್ದೇ ಹೊಗಳಿದ್ದು.

ಈ ವೃತ್ತಾಂತವನ್ನು ಓದಿದಮೇಲೆ ಕೊರವಂಜಿಯ ವಾಚಕರಿಗೆ "ದಕ್ಷಿಣ ವ್ಹಿಯೆಟ್‌ನಾಮಿನಲ್ಲಿ ಅಮೆರಿಕಾದವರು ಏಕೆ ಸೋಲುತ್ತಿದ್ದಾರೆ ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿದುದೇ ಆದರೆ ನಾವು ಆನಂದ ಪುಲಕಿತರಾಗಿ "ಧನ್ಯೋsಸ್ಮಿ, ಧನ್ಯೋsಸ್ಮಿ!" ಎಂದು ನಮ್ಮ ಲೇಖನಿಗೆ ವಿರಾಮ ಕೊಡುತ್ತೇವೆ.

—ಅರವಿಂದ ರಾಜಪುರೋಹಿತ

ಮಾದರಿ ಸಂವಾದ

ಅಮ್ಮ : ಅಕ್ಕಿ ಇಲ್ಲ—ಎಣ್ಣೆಯಿಲ್ಲ—
ಮಗಳು : ನೈಲಾನು ಸೀರೆಯಿಲ್ಲ—
ಮಗ : ಟೆರಿಲಿನ್ ಸೂಟಿಲ್ಲ—
ಅಪ್ಪ : ದುಡ್ಡಿಲ್ಲ—ಕಾಸಿಲ್ಲ
ಎಲ್ಲರೂ : ಬದುಕೇನೂ ಸುಖವಿಲ್ಲ.

ಆ ಕಾಲ—ಈ ಕಾಲ

ಒಂದಾಣೆ ಎರಡಾಣೆಯಲ್ಲೇ
ಕಳೆದಿದ್ದರಂತೆ ನಮ್ಮ ತಾತಪ್ಪ !
ನಾಕಾಣೆ—ಎಂಟಾಣೆ ಎಂದರು ನಮ್ಮಪ್ಪ.
ರೂಪಾಯೊಂದೆರಡಾದರೂ
ಸಾಲದಾಗಿದೆ ನನಗಪ್ಪ.

—ಬಿ. ನ. ಮೂರ್ತಿ

ಮರ್ಯಾದೆ ಮಹಲು

ಚಿರಂಜೀವಿ ಗಣಿತದ ಪರೀಕ್ಷೆ ಮುಗಿಸಿಕೊಂಡು ಮನೇಗೆ ಬಂದ. ಕುಣಿಯುತ್ತಾ ಕುಪ್ಪಳಿಸುತ್ತಾ ಬಂದ ಮಗನನ್ನು ಕಂಡು ಅಪ್ಪನಿಗೆ ಖುಷಿ ಆಯ್ತು, ಮಗ ಗಣಿತದ ಪೇಪರನ್ನು ಚೆನ್ನಾಗಿ ಮಾಡಿರಬೇಕು ಅಂತ.

"ಹೇಗಿತ್ತೋ ಪೇಪರು" ಅಂತ ಅಪ್ಪ ಕೇಳಿದರು.

"ತುಂಬಾ ಈಜಿ ಕಣಪ್ಪ" ಎಂದ ಮಗ.

"ನಂಬರೆಷ್ಟು ಬರುತ್ತಪ್ಪ?" ಎಂದು ಕೇಳಿದರು ಅಪ್ಪ. ಮಗ ಗಣಿತದಲ್ಲಿ ಪ್ರಚಂಡ ಅಂತ ಅವರಿಗೆ ಗೊತ್ತಿತ್ತು, ದಿನಬೆಳಗಾದರೆ ಅವ ಅಂಗಡೀಲಿ ವ್ಯಾಪಾರ ಮಾಡ್ಕೊಂಡು ಬರ್ತಾ ಇದ್ದ ವೈಖರೀನ ಅನುಭವಿಸಿದ್ದವರು ಅವರು.

"ವರ್ಕಿಂಗು, ಅಂಕಿ ಚೆನ್ನಾಗಿ ಬರೆದರೆ 10 ಅಂಕ ಇಟ್ಟಿದ್ರು. ಅದು ಬರೋದು ಅನುಮಾನ ಬಾಕಿ 90 ಬರುತ್ತೆ" ಎಂದ ಹೆಮ್ಮೆಯ ಪುತ್ರ.

ಮಗ ಲೆಕ್ಕಾಚಾರಸ್ಥ ಅಂತ ಅಂದುಕೊಂಡರು. ಉತ್ತರನಾ ಪ್ರಶ್ನೆ ಪತ್ರಿಕೇಲಿ ಹಾಕ್ಕೊಂಡು ಬಂದಿದೀಯ ಅಪ್ಪ? ಅಂತಾನೂ ಕೇಳಿದರು.

ಉತ್ತರಗಳ್ನ ಹಾಕ್ಕೊಂಡು ಬಂದಿದ್ದ. ಅಪ್ಪಾನೂ ಸರಿಯಾದ ಉತ್ತರಗಳನ್ನ ಹಾಕ್ಕೊಂಡು ಮಗನ ಉತ್ತರಗಳಿಗೆ ತಾಳೆ ನೋಡ್ಕೊಳ್ಳೋಕೆ ಸಿದ್ಧವಾಗಿದ್ದರು.

ಉತ್ತರಗಳ ತಾಳೆ ಪ್ರಾರಂಭವಾಯ್ತು.

"ಹೇಳೋ ಉತ್ತರ ಮೊದಲನೆ ಲೆಕ್ಕಕ್ಕೆ" ಕೇಳಿದರು ಅಪ್ಪ.

"4.56" ಎಂದ ಮಗ.

"ತಪ್ಪು, ಹುಯ್ಕೊ ಮಣ್ಣು" ಎಂದರು ಅಪ್ಪ.

"ಕಳ್ಕೊ 5 ನಂಬ್ರು, ಇನ್ನೂ 85 ಇದೆ ಎಂದ ಮಗ.

ಆಮೇಲೆ 2ನೇ ಲೆಕ್ಕದ ಉತ್ತರ ನೋಡಿದ್ದಾಯ್ತು. ಅದೂ ತಪ್ಪು. "ಮಣ್ಣು ಹುಯ್ಕೊ" ಎಂದ ಅಪ್ಪ.

"ಕಳ್ಕೊ 5 ನಂಬರು, ಇನ್ನೂ 80 ಇದೆ. ಫಸ್ಟ್ ಕ್ಲಾಸು" ಎಂದ ಮಗ.

3, 4, 5, 6, 7. 8, 9, 10 ರ ಲೆಕ್ಕಗಳ ಉತ್ತರಗಳೆಲ್ಲಾ ತಾಳೆ ನೋಡಿ ಆಯ್ತು. ಎಲ್ಲಾ ತಪ್ಪು.

" ಕಳ್ಕೊ ನಂಬರು " ಅಂತಲೇ ಮಗ ಹೇಳಂತ್ಲಾ ಬಂದ. ಅಪ್ಪೂ ಕಳ್ಕೋತಾ ಬಂದ. 5 ನಂಬರೂ ಬರೋ ಸೂಚನೆ ಕಾಣಬರಲಿಲ್ಲ. ಅಪ್ಪ ಕಿಡಿಕಿಡಿಯಾದ ಅವರು ಎಂದೂ ಇಷ್ಟು ಸಲೀಸಾಗಿ ಕಳೆದಿದ್ದಿಲ್ಲ "ಸೆಂಟ್ ಪರ್ಸೆಂಟ್" ಎಂದೆಯಲ್ಲೋ ಅಂತ ಗುಡುಗಿದರು ಅವರು, ನಿನ್ನೆ, ಮೊನ್ನೇನೇ ಬೊಗಳಬಹುದಾಗಿತ್ತಲ್ಲ, ಯಾಕೆ ಹೇಳಲಿಲ್ಲ ಅಂತ. " ಇವತ್ತೇ ಕಡೇ ಪೇಪರಪ್ಪ. ಸೆಂಟ್ ಪರ್ಸೆಂಟ್ ಕ್ಷೌರ ಖಾಯಂ ಆದದ್ದು ಇವತ್ತೇ ಕಣಪ್ಪ " ಎಂದ ಮಗ. ಅಪ್ಪಂಗೆ ಸ್ವಲ್ಪ ಅನುಮಾನ ಬಂತು ಕ್ಷೌರ ಯಾರ್ಗೆ ಆದದ್ದು ಎಂಬುದು ಅವರ ಸಮಸ್ಯೆ. ಅಪ್ಪಂಗೆ ಕೋಪಾನೇ ಬಂತು. ಮಗಂಗೆ ಪರೀಕ್ಷೇಲಿ ಸೊನ್ನೆ ನಂಬ್ರು ಬರುತ್ತೆ ಅಂತ ತಿಳಿದು ಅವರಿಗೆ ಕೋಪ ಬರಲಿಲ್ಲ. ಮಗ ಸರಿಯಾಗಿ ಮಾತಾಡಲಿಲ್ವಲ್ಲ, ಕೊಂಕೇ ಇಲ್ವಲ್ಲ ಇವನ ಮಾತಿನಲ್ಲಿ ಅಂತ ಅವರಿಗೆ ಮನಸ್ಸಿನಲ್ಲಿ ದುಗುಡವಾಯ್ತು. " ಎದ್ದೋಗೋ ತರ್ಲೆ " ಎನ್ನುತಾ ಅವರು ಕಡೇಗೆ ಕೇಳಿದರು ಮಗನ್ನ ಕ್ಷೌರ ಆದದ್ದು ನಿನಗೋ. ನನಗೋ ಹೇಳಲೇ " ಅಂತ.

ಇಬ್ಬರಿಗೂ ಅಲ್ಲ ಕಣಪ್ಪ ಎಂದ ಮಗ.

" ಮತ್ಯಾರೋ ಪರೀಕ್ಷೆಗೆ ಕಟ್ಟೋಕೆ ಹಣ ಕೊಟ್ಟಿದ್ದು "ಎಂದು ಕೇಳಿದರು ಅಪ್ಪ.

" ಅಮ್ಮ ಕಣಪ್ಪ." ಅಂದ ಮುದ್ದುಮಗ.

" ಫೇಲ್ ಆದ್ರೆ ನಷ್ಟವಿಲ್ಲ, ಹೋಗಲೇ " ಎಂದ ಅಪ್ಪ.

* * * *

ಗಂಡ ಕಛೇರೀಲಿ ಮಧ್ಯಾಹ್ನವೆಲ್ಲಾ ಕಷ್ಟಪಟ್ಟು ಹಳೆ ಫೈಲುಗಳನ್ನೆಲ್ಲ ಹುಡುಕಿ ಯಾವುದೂ ಸಿಕ್ಕದೆ ಎರಡೇ ಎರಡು ಉದ್ದಿನವಡೆ ತಿಂದು ಸುಸ್ತಾಗಿ ಮನೆಗೆ ಬಂದಿದ್ದ. ಸಾಕಷ್ಟು ಹಿಂಗೈ ಕಾಸು ಸಿಕ್ಕಿರಲಿಲ್ಲ ಹೀಗಾಗಿ ಬಿಸಿಲಿನ ತಾಪಾನೂ ಸೇರಿ ಮೈ ಕೈ ಪರಚಿಕೊಳ್ಳುತ್ತಲೇ ಬಂದ. ಸಂಜೆ ಆರು ಗಂಟೆ. ಮುತ್ತೈದೆಯರು ಹಗುರಾಗಿ ವಿಭೂತಿ ಸಿಂಪಡಿಸಿಕೊಂಡು ಸಿನಿಮಾಗಳಿಗೆ ಹೋಗುವಂಥ ವೇಳೆ. ಎಳೆ ವಯಸ್ಸಿನ ಹೆಂಡತಿ, ಕಾಲೇಜು ಮೆಟ್ಟಿಲು ಹತ್ತಿ ಗೃಹವಿಜ್ಞಾನ ಕಲಿತ ಹೆಂಡತಿ ವೈನವಾಗಿ ಸಿಂಗರಿಸಿಕೊಂಡು "ಚಂದಕ್ಕಿಮಾಮ, ಚಕ್ಕುಲಿಮಾಮ" ಅಂತ ಹಾಡಿಕೊಳ್ಳುತ್ತ, ಬಳುಕುತ್ತಾ ಓಡಾಡುತ್ತಿದ್ದಳು. ಗಂಡನಿಗೆ ಆಶ್ಚರ್ಯವಾಯಿತು. ಆದರೂ ಹಾಡುತ್ತಿದಾಳಲ್ಲ. ಚಕ್ಕಲಿ ಸಿಗುತ್ತೇನೋ ಅನ್ನೋ ಚಪಲ. ಗಂಡ ಸ್ವಲ್ಪ ಶಾಂತಿ ತಂದುಕೊಂಡು " ಏನೆ ಇದು, ಚಂದಕ್ಕಿ ಮಾಮ " ಎಂದ, ಹೆಂಡತೀಗೆ ಕೋಪ ಇನ್ನೂ ಇಳಿದೇ ಇರಲಿಲ್ಲ. " ಚಂದಕ್ಕಿ ಮಾಮ " ಅಂತ ಭೂಮಿಮೇಲಿನ ತಂಪುಕಾಲದ ಹಾಡು ಪಲುಕುತ್ತಿದ್ದಳೇ ಹೊರತು ಆಕೆ ಮೈ ಎಲ್ಲ ಚಂದ್ರಗ್ರಹದ ಹಾಗೇ ಕಾಯುತ್ತಿತ್ತು. ಹಿಂದಿನ ದಿನ ಅದಾವುದೋ ಪೇಪರ್‌ನಲ್ಲಿ ಬಂದಿದ್ದ ಅಡಿಗೆ ಮಾಡಿದುದರ ಫಲವಾಗಿ ಗಂಡ ಹೆಂಡತಿ ಕಿತ್ತಾಡಿ ಅದು ದೊಡ್ಡ ರಾದ್ಧಾಂತ ಆಗಿ ಹೆಂಡತಿ ತಲೆಕೂದಲನ್ನೆಲ್ಲ ಎಳೆದು ಗುಂಜಾಡಿದ್ದ ಗಂಡ. ಹೆಂಡತೀಗೆ ತುಂಬಾ ಸಿಟ್ಟು ಬಂದು ಗಂಡನ ತಲೇನ ನೋಡಿದಾಗ

ಅಸೂಯೆ ಹುಟ್ಟಿತು. ಸ್ವಾಭಿಮಾನ ಕೆರಳಿತ್ತು. ಸ್ತ್ರೀಪ್ರಧಾನಿ ಎಂಬ ತಿಳುವಿತ್ತು, ಪ್ರಧಾನಿ ರೂಪು ಅಚ್ಚುಮೆಚ್ಚಾಗಿತ್ತು ಅದಕ್ಕೆ ಗಂಡ ಕಛೇರಿಗೆ ಹೊರಟುಹೋದ ಮೇಲೆ ಸ್ವಹಸ್ತದಿಂದಲೇ ಅತ್ತೆಮನೆ ಕತ್ತರೀಲೆ ಕೂದಲಿಗೆ ಬಾಬ್ ಮಾಡಿ, ಚಂದಕ್ಕಿ ಮಾಮ ಹಾಡುತ್ತಿದ್ದಳು. ಮನಸ್ಸಿಗೆ ಶಾಂತಿ ತಂದುಕೊಂಡಿದ್ದಳು. ಹೆಂಡತಿ ಗೆಜ್ಜೆ ಹೆಜ್ಜೆ ಹಾಕಿ ಬ್ಯಾಲೆನೃತ್ಯ ಕೋವಿದೆ ಹಿಮ್ಮಡಿಮೇಲೆ ತಿರಿಗಿದಹಾಗೆ ಸರ್ರನೆ ತಿರುಗಿದಳು ಬೆಳಿಗ್ಗೆ ಕಂಡಿದ್ದ ಸಿರಿಮುಡಿ ಮಾಯವಾಗಿತ್ತು.

" ಯಾವನೇ ಅವನು ಚಂಡಾಲ, ಬೇಕೂಫ, ನಿನ್ನ ಸಿರಿಮುಡಿಗೆ ಕೈಹಾಕಿದ್ದು " ಎಂದು ಹೌಹಾರಿದ ಗಂಡ

" ನೀವೇ ಅಲ್ವೇನ್ರೀ " ಅಂತ ಬಳುಕಿತು ಚಂದಕ್ಕಿ ಮಾಮ !

* * * *

ಅಕೌಂಟೆಂಟ್ ಜನರಲ್ ಕಛೇರಿಯ ಸಾವಿನ ತೆರಿಗೆ ಸೆಕ್ಷನ್ ರಾಮಣ್ಣನಿಗೆ ಆಶ್ಚರ್ಯ ತನ್ನ ಕೈಕೆಳಗಿನ ಜವಾನ ಬಡ ಕೆಂಪ ಇಷ್ಟು ಸಲೀಸಾಗಿ ಜೀವನ ಹೇಗೆ ನಡೆಸ್ತಾನೆ ಅಂತ. ರಾಮಣ್ಣ ಎಂ. ಎಸ್, ಸಿ. ಚಿಗುರುಮೀಸೆ. ಬರುತ್ತಿದ್ದ ಸಂಬಳ ಪಗಾರ ಎಲ್ಲಾ ತನ್ನೊಬ್ಬನಿಗೆ ಮಾತ್ರ ಸಾಕಾಗುವಂತಿತ್ತು. ವಿರಾಮ ಕಾಲದಲ್ಲಿ ಎಲ್ಲ ನೌಕರರು ಕಾಫಿ ತಿಂಡೀಗೆ ಕ್ಯಾಂಟಿನ್‌ಗೆ ಹೋಗುತ್ತಿದ್ದರು. ಆಫೀಸರ್ ಸಹ ಒಂದು ವಡೆ ತಿಂದು ಕಾಸು ಮಿಕ್ಕಿದ್ದರೆ ಒಂದು ಜೊತೆ ಪೂರಿ ಪಲ್ಯಾನೂ ತಿಂದು ಕಾಫಿ ಕುಡಿದು ಸಂತೃಪ್ತಿಯನ್ನು ಬೀರುತ್ತ ಬರುತ್ತಿದ್ದರು. ಆಫೀಸರು ಕೆಂಪನಮೇಲೆ ಕನಿಕರ ತೋರಿಸುತ್ತಾ " ಏನೋ ಕೆಂಪ ಕ್ಯಾಂಟಿನ್‌ಗೆ ಹೋಗಿ ತಿಂಡಿ ತಿನ್ನಲ್ವೇನೋ " ಅಂತ ವಿಚಾರಿಸಿದರು. " ಹೋಟೆಲ್ ತಿಂಡಿ ನನ್ನ ಮೈಗೆ ಆಗುಲ್ಲ ಸಾಹೇಬ್ರ " ಅಂದ ಕೆಂಪ. ಮತ್ತೆ ಏನು ತಿಂತೀಯಾ ಅಂತ ಸಾಹೇಬ್ರು ವಿಚಾರಿಸಿದರು " ನಾನು ಮನೆ ಇಂದ್ಲೆ ಬುತ್ತಿ ತರ್ತೀನಿ, ಕಣ್ರಿ " ಅಂದ ಕೆಂಪ. ಸಾಹೇಬ್ರಗೆ ಆಸೆ ಕೆಂಪನ ಬುತ್ತಿ ನೋಡೋಕೆ. ನೋಡ್ರಿ ಸಾಹೇಬ್ರ ಅಂತ ಕೆಂಪ ಬುತ್ತಿ ಬಿಚ್ಚಿದ. ಸೊಗಸಾದ ಘಮುಘಮಿಸೋ ಅನ್ನ. ಫ್ಲಾಸ್ಟಿಕ್ ತುಂಬ ಅರ್ಧ ಸೇರು ಗಟ್ಟಿಹಾಲು. ಜೊತೆಗೆ ಒಂದು ಮೂಸಂಬಿ ಹಣ್ಣು. ಕೆಂಪ ವಿನಯದಿಂದ ನಮಗೆ ಹೋಟಲಿಗೆ ಹೋಗಿ ತಿಂಡಿ ತಿನ್ನಲಿಕ್ಕೆ ಹಣ ಎಲ್ಲಿ ಬರಬೇಕು ಸಾಹೇಬ್ರ ಅಂತ ಅಂದ. ಸಾಹೇಬ್ರಗೆ ಮನಸ್ಸೇ ನೆಮ್ಮದಿಯಾಗಿರಲಿಲ್ಲ. ಎಷ್ಟೋ ವರ್ಷಗಳಿಂದ ಅಂಥ ಹಾಲನ್ನು ಅವರು ಕಂಡಿದ್ದೇ ಇಲ್ಲ ಅವರು ಕೆಂಪನ್ನ ಕೇಳಿದರು—" ನಾನ್ಯಾರೋ ಕೆಂಪ " " ಅಂತ ಕೆಂಪಂಗೆ ಸ್ವಲ್ಪ ಮನಸ್ಸು ಅಳುಕಿತು, ಪರವಾ ಇಲ್ಲ ಹೇಳು ಎಂದರು ಸಾಹೇಬ್ರು.

" ನಮ್ಮ ಆಫೀಸರಲ್ವ ನೀವು" ಎಂದ ಕೆಂಪ,

ನಾನೇನು ಪಾಸ್ ಮಾಡಿದ್ದೇನೆ. ಗೊತ್ತೆ ?

" ಎಂ. ಎ., ಸಿ ಅಲ್ವ " ಅಂದ ಕೆಂಪ.

" ನನ್ನ ಸಂಬಳ ಎಷ್ಟು ಗೊತ್ತೆ " ಕೇಳಿದರು ಸಾಹೇಬ್ರು.

" ತಿಂಗಳಿಗೆ ನಾನೂರು ಅಂತ ಗೊತ್ತು ನನ್ಗೆ " ಎಂದ ಕೆಂಪ.

" ಮತ್ತೆ ನಿನಗೆ ಈ ಗಟ್ಟಿ ಹಾಲು ಎಲ್ಲಿಂದ ಬರುತ್ತೆ " ಎಂದು ಸಾಹೇಬ್ರು ಕೇಳಿದರು. ಸಾಹೇಬರ ತನಿಖೆ ಕೆಂಪನಿಗೆ ಅರ್ಥವೇ ಆಗ್ಲಿಲ್ಲ. ಆದರೂ ಕೆಂಪ ಜಾಣ, ಜೀವನದಲ್ಲಿ ನಿರಂತರ ನರೆತಿದ್ದವ. ಆಸ್ತಿಪಾಸ್ತಿ ಕಂಡಿದ್ದವ.

ನಮ್ಮನೇಲೂ ಬಿ.ಎಸ್ ಸಿ., ಎಂ. ಎಸ್.ಸಿ , ಗಳಿವೆ ಸಾಹೇಬ್ರು " ಎಂದ ಕೆಂಪ. ಹಾಗೆಂದು ಸಾಹೇಬ್ರನ್ನ ತನ್ನ ಮನೇಗೆ ಆಹ್ವಾನಿಸಿದ ಕೆಂಪ. ಸಾಹೇಬ್ರಿಗೂ ಆಸೆ. ಕೆಂಪನ ಮನೇಗೆ ಹೋಗಿ ಅವನ ದುಡಿಯೋ ಮಕ್ಕಳ ಮರಿಗಳ್ನ ಕಂಡು ಬರಬೇಕು ಅಂತ. ಮಾರನೆ ದಿನ ಸಂಜೆ ಸಾಹೇಬ್ರು ಆಫೀಸು ಕ್ಲಬ್ಬು ಮುಗಿಸಿಕೊಂಡು ಕೆಂಪನ ಮನೆಗೆ ಭೇಟಿ ಕೊಟ್ಟರು. ಕೆಂಪ ಸಾಹೇಬರನ್ನ ಆದರದಿಂದ ಬರಮಾಡಿಕೊಂಡು ಅವನ ಮನೆಯವರ ಪರಿಚಯ ಮಾಡಿಕೊಡಲು ಪ್ರಾರಂಭಿಸಿದ. ಮೊಟ್ಟ ಮೊದಲಿಗೆ ದನದ ಕೊಟ್ಟಿಗೆಗೆ ಸಾಹೇಬರನ್ನ ಕರೆದುಕೊಂಡು ಹೋಗಿ ಅಲ್ಲಿದ್ದ ಸೊಗಸಾಗಿ ಮೈ ಬಂದಿದ್ದ ಎಮ್ಮೆಯನ್ನ ತೋರಿಸಿ " ನೋಡಿ ಸಾಹೇಬ್ರು, ಇದು ನಮ್ಮ ಮನೆಯಲ್ಲಿ ಎಂ. ಎಸ್.ಸಿ., ತಿಂಗಳಿಗೆ ನಾನೂರು ದುಡೀತಿದೆ " ಎಂದ. ಆಮೇಲೆ ಕೊಂಬು ಮೂಟವಾಗಿದ್ದು ಕಪ್ಪು ಮೈ ಝಳಿಪಿಸುತ್ತಾ ನಿಂತಿದ್ದ ಹಸುವೊಂದನ್ನ ತೋರಿಸಿ " ನೋಡಿ ಸಾಹೇಬ್ರು ಇದು ಬಿ. ಎಸ್.ಸಿ., ಇನ್ನೂರ ಐವತ್ತು ದುಡೀತಿದೆ. ಈ ತಿಂಗಳು ಮುನ್ನೂರೇ ಆಯ್ತು. ಗ್ರೇಡು ಬಂದಿರಬೇಕು " ಎಂದ ಕೆಂಪ.

ಕುರಿ ಮಂದೆ ತೋರಿಸಿ ಇವು ಒಂದೊಂದೂ ಬಿ. ಕಾಮ್ ಎಂದ.

ಅಲ್ಲೇ ಕೋಳಿಗಳು ಮೇಯುತ್ತಿತ್ತು. ಮೊಟ್ಟೆಗಳನ್ನೂ ಇಟ್ಟಿತ್ತು. ಹೆಣ್ಣು ಕೋಳಿ ಕಾವು ಕೊಡುತ್ತಿತ್ತು. ಇವೆಲ್ಲ S. S. L. C. ಸಾಹೇಬ್ರು " ಎಂದ ಕೆಂಪ.

ಸಾಹೇಬ್ರಿಗೆ ಮನಸ್ಸಿನಲ್ಲೇ ಒಂದು ಕಡೆ ಆನಂದ. ಇನ್ನೊಂದು ಕಡೆ ವ್ಯಥೆ. ಕೆಂಪನಿಗೆ ಏನು ಹೇಳಬೇಕೋ ಅವರಿಗೆ ತಿಳಿಯದಾಯಿತು. ಕೆಂಪ ತನ್ನ ಮಗನನ್ನ ಕರೆದು " ಸಾಹೇಬ್ರು ಬಂದವ್ರೆ ಕಣ, ಅವರಿಗೆ ಪಕ್ಕದ ಹೋಟಲಿಗೆ ಹೋಗಿ ಒಂದು ಕಾಫಿ ತಂದು ಇಲ್ಲಿಡ್ಲಾ. ಅವರಿಗೆ ಹಾಲು ಗೀಲು ಆಗೊಲ್ಲ " ಅಂತ ಸಣ್ಣ ಧ್ವನಿಯಲ್ಲಿ ಹೇಳಿದ್ದನ್ನ ಕೇಳಿದ ಸಾವಿನ ತೆರಿಗೆ ಅಧಿಕಾರಿಗೆ ಸಾವೇ ಬಂದು ಎರಗಿದಂತಿತ್ತು !

— ಹಾ. ರಾ.

ತುಂಬ

ಮೈತುಂಬ ಸಾಲ ;
ತಲೆ ತುಂಬ ಚಿಂತೆ ;
ಕೈ ತುಂಬ ಕೆಲಸ
ಜೇಬಂತೂ ಕಾಲಿ ; ಎಲ್ಲ—
ಹಣೆತುಂಬ ಬರೆದಂತೆ

ಬಿ. ನ. ಮೂರ್ತಿ

ಹಿತ ನುಡಿ

ಕ್ರೈಂಬ್ರಾಂಚ್ ಸಬ್ ಇನ್ಸ್‌ಪೆಕ್ಟರ್ ದೊಂಗಣ್ಣ ಬಾಬುಗಳು ರಸ್ತೆಯಲ್ಲೇ ಎದುರಾದ ಮುದ್ದೂರಾಯನನ್ನು ಕರೆದುಕೊಂಡು, ಯಾಪಿಂಕ ಠಾಣೆಯಲ್ಲಿ ಕಾಲಿರಿಸಿದಾಗ ಸೆಂಟ್ರಿನಿಂತಿದ್ದ ಮುನಿಯು ಸೇದುತ್ತಿದ್ದ ಬೀಡಿಯನ್ನು ಗೋಡೆಗೆ ತಿಕ್ಕಿ ಆರಿಸಿ, ಕಿವಿಯಲ್ಲಿ ಸಿಕ್ಕಿಸಿಕೊಂಡು, ಅಟೆನ್ಷನ್‌ಗೆ ಬಂದು, ಬಾಬುಗಳಿಗೆ ಒಂದು ಸಲಾಂ ಹಾಕಿ ನಿಂತ. ಮಾಮೂಲಾಗಿ ಅವನು ಮುದ್ದೂರಾಯನನ್ನು ನೋಡಿ ಹಲ್ಲು ಕಿರಿಯುದೆ, ಸಲಾಂ ಹೊಡೆಯದೆ ಇದುದ್ದನ್ನು ನೋಡಿ ಬಾಬುಗಳಿಗೆ ಆಶ್ಚರಿಯಾಯ್ತು. ಆಫೀಸಿನ ಕೋಣೆ ಒಳಗೆ ಬಂದು ಬಾಬುಗಳು ತಮ್ಮ ಖಾಕಿ ಹ್ಯಾಟನ್ನು ಮೇಜಿನ ಮೇಲಿರಿಸಿ, ನಡುವಿಗೆ ಬಿಗಿದಿದ್ದ ಬೆಲ್ಟನ್ನು ಸಡಲಿಸಿ, ಕುರ್ಚಿಯಲ್ಲಿ ಕುಳಿತು, ಒಂದು ಫಲಾತಿಯನ್ನು ಹೊತ್ತಿಸಿಕೊಂಡರು. ಮುದ್ದೂರಾಯನು ಒಂದು ಕಟ್ಟು ಅಸ್ತಮಾಶಾಂತಿ ಬೀಡಿಯನ್ನು ಮೇಜಿನ ಮೇಲಿರಿಸಿಕೊಂಡು ಕುಳಿತುಕೊಂಡ.

"ನಿಮಗೂ ಸೆಂಟ್ರಿ ಮುನಿಯನಲ್ಗೂ ಏನಾರ ಫೈಟಿಂಗ್ ಆಗೈತಾ ?" ಎಂದು ದೊಂಗಣ್ಣ ಬಾಬುಗಳು ಮುದ್ದೂರಾಯನನ್ನು ತೀಕ್ಷ್ಣವಾಗಿ ನೋಡುತ್ತಾ ಕೇಳಿದರು.

"ಇಲ್ಲಲ್ಲಾ ಅಂಥದೂ ಏನೂ ಆಗ್ಲಿಲ್ಲವಲ್ಲಾ" ಅಂದ ಮುದ್ದೂರಾಯ.

"ಇಪ್ಪತ್ತು ವರ್ಷ ಈ ಪೋಲೀಸ್ ಖಾತೇಲಿ ಸರ್ವೀಸ್ ಆಕಿವ್ನಿ. ಈ ದೇಹ ಕೇಡಿಗಳ್ನ ಇಡಿಯೋದ್ರಲ್ಲೇ ಮುಪ್ಪಾಗೈತೆ."

"ಆಗಿರ್ಬೋದು ಆದ್ರೆ ಇದಕ್ಕೂ ಅದಕ್ಕೂ ಏನು ಸಂಬಂಧ ಅನ್ನೋದು ನನಗೆ ತಿಳೀಲಿಲ್ಲ"

"ಪೋಲೀಸ್ನೋರು ಒಂದು ಸಣ್ಣ ಇಸ್ಯಾನೂ ಗಮನಿಸ್ತಾರೇಂತ ನಿಮಗೆ ತಿಳಿದಿರ್ಬೋದು. ಆವರ್ದು ಅದ್ದಿನ ಕಣ್ಣು..."

"ಹದ್ದಿನದಲ್ಲ, ಎಮ್ಮೆ ಕಣ್ಣೆ ಆಗ್ಲಿ ನಂಗೇನಂತೆ ?" ಮುದ್ದೂರಾಯ ನಿರುತ್ಸಾಹದಿಂದ ಹೇಳಿದ.

"ಒಂದು ಸಣ್ಣ ಕೂದಲೆಳೆಯಿಂದ ದೊಡ್ಡ ಖೂನಿ ಕೇಸು ಪತ್ತೆ ಮಾಡವ್ರೆ..."

"ಯಾರು ನೀವೇ ?"

ದೊಂಗಣ್ಣ ಬಾಬುಗಳು ಉಗುಳು ನುಂಗುತ್ತಾ "ನಾನಲ್ಲ...ನಾವು ಅಂದ್ರೆ ಪೋಲಿಸ್ನೋರು " ಅಂತ ಹೇಳಿದರು.

"ಅದ್ಸರಿ, ತಾವು ಯಾವ ವಿಷಯವಾಗಿ ಇಷ್ಟೆಲ್ಲಾ ತನಿಖೆ ಮಾಡ್ತಿದೀರಾ ನನಗೆ ಅರ್ಥವಾಗ್ಲಿಲ್ಲ..."

"ಮುನಿಸಾಮಿ ನಿಮ್ಮಾವು ಜಗಳ ಕಾದವ್ನ ?"

"ಇಲ್ಲ...

"ಮತ್ತೆ ನಿಮ್ಗೆ ಸಲಾಂಕೂಡ ಆಕ್ಲಿಲ್ಲ. ನಿಮ್ಮನ್ನ ನೋಡಿ, ಅಲ್ಲೂ ಕಿರೀನಿಲ್ಲ..."

"ಅವನು ನನ್ನನ್ನ ನೋಡಿ ಹಲ್ಲು ಕಿರಿಯೋಕೆ ನಾನೇನು ಕೋತೀನೆ ?"

"ಅಂಗಲ್ಲಾ, ಜಿನಾ ನಿಮ್ಗೆ ಮೂರು ನಾಲ್ಕು ಸಲಾಂಗೋಳ್ನ ಆಕ್ತಿದ್ದವ್ನು ಇಂಗೆ ಏಕ್‌ದಂಡು ಮುಖ ತಿರುಗಿಸ್ಕೊಬ್ಯಾಕಿದ್ರೆ ಏನೋ ಕಾರಣ ಇರ್ಲೇಬೇಕು" ಎಂದು ದೊಡ್ಡ ಕೇಸು ಪತ್ತೆ ಮಾಡಿದವರಂತೆ ಹೆಮ್ಮೆಯಿಂದ ಬೀಗಿದರು. "ನಿಜ ಯೋಳ್ಬುಡಿ. ದೊಂಗಣ್ಣನ ತಾವು ಸುಳ್ಳು ಏಳಿ ಏನೂ ಪ್ರಯೋಜನ ಇಲ್ಲ..." ಎಂದು ಪೀಡಿಸಿದರು.

"ನಿಮ್ಮ ಹತ್ರ ಹೇಳ್ದಿದ್ರೆ ಇನ್ಯಾರು ಕೇಳೋವ್ರಿದಾರೆ ಬಾಬುಗಳೇ. ಸೆಂಟ್ರಿ ಮುನಿಯ ಕೇಳ್ದಾಗಲೆಲ್ಲಾ ನಾನೂ ಕಾಸು ಕೊಟ್ಟೂ ಕೊಟ್ಟೂ, ಸೋತಿರೋ ವಿಷಯ ನಿಮ್ಮ ಗಮನಕ್ಕೆ ಬಂದಿರಬಹುದು. ಮೊನ್ನೆದಿನ ಖರ್ಚಿಗೆ ಕಾಸಿಲ್ಲ. ಅರ್ಜಂಟಾಗಿ ಹತ್ತು ರೂಪಾಯಿ ಬೇಕೂಂದ. ಖಾಕಿ ವೇಷದವನು ನಾಲ್ಕು ಮಂದಿಯೆದುರಿಗೆ ಸಲಾಂ ಮಾಡಿದರೆ ನನಗೂ ಗೌರವವಲ್ಲ ಅನ್ನೋ ಮುಲಾಜಿನಿಂದ, ನಾನು ಕೈಲಿದ್ದಿದ್ರೆ ಹಾಳಾಗಿ ಹೋಗ್ಲಿ ಅಂತ ಕೊಟ್ಬಿಡೋವೆ. ಆದ್ರೆ ಕಾಸಿರಲಿಲ್ಲ ಏನ್ಮಾಡ್ಲಿ ನೀವೇ ಹೇಳಿ...?"

"ಅಂದ್ರೆ ಕೊಡ್ಲಿಲ್ಲ ಅನ್ನಿ..."

"ಇಲ್ಲ ಕಣಯ್ಯಾ ! ಅಂತ ಖಡಾಖಂಡಿತವಾಗಿ ಹೇಳ್ಬಿಟ್ಟೆ. ಆ ದಿನದಿಂದ ಹೀಗೆ ಮುಖ ತಿರುಗಿಸಿಕೊಂಡಿದಾನೆ."

"ನೀವು ಭಾಳ ತಪ್ಪು ಮಾಡ್ಬಿಟ್ರಿ ಮಂದ್ದೂರಾವ್" ಎಂದರು ಬಾಬುಗಳು ಆಷ್‌ಟ್ರೇಯಲ್ಲಿ ಫಿಲಾಫಿಯನ್ನು ಕುಕ್ಕುತ್ತಾ.

"ನಂದೇನು ಸ್ವಾಮಿ ತಪ್ಪು. ನಾನೇನು ಅವನಿಂದ ಸಾಲ ತೆಗೊಂಡಿದೆ. ಏನೋ ಕೈಲಿದ್ದಿದ್ರೆ ಕೊಡ್ಬಹುದಾಗಿತ್ತು. ಇರಲಿಲ್ಲ, ಇಲ್ಲಾಂತಂದೆ, ಅದಕ್ಕೆ ನಂದೇ ತಪ್ಪು ಅಂತೀರಲ್ಲಾ...?"

"ಬ್ಲಡ್ ಪ್ರೆಸರ್ರು ಏರಿಸ್ಕೊಬ್ಯಾಡ್ರಿ ಮಂದ್ದೂರಾವ್, ವಸಿ ನಾನು ಏಳೋದ್ನ ಕೇಳ್ಕೊಳ್ಳಿ ಆವೋಕೆ ನಿಮ್ಗೆ ಅರ್ಥ ಆಯ್ತದೆ. ಈಗ ಯಾವ ರಾಜ್ಯ ನಡೀತಿದೆ ಯೇಳಿ...?"

ಮುದ್ದೂರಾಯನಿಗೆ ಬಾಬುಗಳ ತರ್ಕವೇ ಅರ್ಥವಾಗುತ್ತಿರಲಿಲ್ಲ, ಅವನಿಗೇನೊ ಬಾಬುಗಳೂ ತಮ್ಮ ತರ್ಕವನ್ನು ಕೇಳಿ ತಾವೇ ಅಚ್ಚರಿ ಪಡುತ್ತಿದ್ದುದೂ ಉಂಟು. ಇದ್ದಕ್ಕಿದ್ದಂತೆ ಈ ಪಾಲಿಟಿಕ್ಸ್ ಪ್ರಶ್ನೆಗೆ ಏನುತ್ತರ ಕೊಡಬೇಕೆಂದು ತಿಳಿಯದೆ ಮುದ್ದೂರಾಯ ತಲೆ ಕೆರೆದುಕೊಂಡ.

"ಯಾವ ರಾಜ್ಯ ಅಂದ್ರೆ ಕಾಂಗ್ರೆಸ್ಸು ರಾಜ್ಯವೇ ?"

"ಅದಲ್ರೀ ಯಾವ ಪ್ರಭುತ್ವ ಅಂತ ಕೇಳ್ದೆ"

ಅಂದ್ರೆ ಪ್ರಜಾಪ್ರಭುತ್ವ ಎನ್ನಲೇ ?"

"ಅಂದ್ಮೇಲೆ ಎಲ್ಲಾ ಪ್ರಜೆಗಳ್ಗೂ ಸಮಾನ ಹಕ್ಕು ಭಾದ್ಯತೆ ಉಂಟೋ ಇಲ್ವೋ ?"

"ಉಂಟು."

"ಸೆಂಟ್ರಿಮನಿಯು, ಇನ್‌ಸ್ಪೇಟರ್ರು ಆಗ್ಬೋದು. ಓಂಮಿನಿಸ್ಟ್ರು ಆಗ್ಬೋದು ಅಲ್ಲವಾ್ರ..."

"ಅದು ಶರಿಯೋ ಅವನ ನಸೀಬು ಹೇಗಿದ್ಯೋ ಹೇಗೆ ಹೇಳೋಕಾಗತ್ತೆ ?"

"ಅದ್ಕೆ ನಾನು ಏಳೋದು. ಈ ಕಾಲದಾಗೆ ಯಾರ್ನೂ ಎದುರು ಆಕ್ಕೊ ಬ್ಯಾಡ್ದೂಂತ..."

"ಅಂತಂದ್ರೆ ಹತ್ತು ರೂಪಾಯಿನ ನೋನೇ ಎಲ್ಲಾದ್ರೂ ಭಿಕ್ಷೆ ಎತ್ತಿಕೊಂಡು ಬಂದು ಮುನಿಯನಿಗೆ ಕೊಡ್ಬೇಕಾಗಿತ್ತು ಅಂತ್ಲೋ ನಿಮ್ಮವಾದ" ಮುದ್ದೂರಾಯ ಖಾರವಾಗಿ ಕೇಳಿದ.

"ಅಂಗೂ ಮಾಡ್ಬೋದು ಅಂಗಿಲ್ಲದಿದ್ರೆ ಡಿಪ್ಲೊ ಮಾಟಿಕ್ಕಾಗಿ ಉತ್ತರ ಏಳ್ಬೇಕು"

"ಇನ್ನು ಹೇಗೆ ಸ್ವಾಮಿ ಉತ್ತರ ಹೇಳೋದು ಕಡ್ಡಿ ಎರಡು ತುಂಡು ಮಾಡಿದ ಹಾಗೆ ಹೇಳಿದ್ನಲ್ಲಾ..."

"ಛೆ...ಛೆ...ಛೆ...ಈ ಕಾಲದಾಗೆ ಕಡ್ಡಿ ಎರಡು ತುಂಡು ಮಾಡ್ಲೇಬ್ಯಾಡ್ದು ಮುದ್ದೂರಾವ್. ಅದೇ ತಪ್ಪು ಮಾತ್ನಾಡಿದ್ರೆ ಅಡ್ಡ ಗೋಡೆ ಮ್ಯಾಕೆ ದೀಪ ಇಟ್ಟಂಗೆ ಮಾತ್ನಾಡಬೇಕು, ಆಗ್ಲಿ ನೋಡೋವಾ ಅನ್ಬೇಕು, ಆಗೋಕಿಲ್ಲ ಅಂತ ಯಾವ್ದಕ್ಕೂ ಅನ್ನಬ್ಯಾಡ್ದು. ನಿನ್ನ ಆಸ್ತೀನೆಲ್ಲಾ ನಂಗೆ ಬರ್ಕೊಡು ಅಂದ್ರೆ ಆಗ್ಲಿ ನೋಡೋದು, ಅನ್ಬೇಕೆ ಒರ್ತು, ಆಗೋಕಿಲ್ಲ ಅಂತಮಾತ್ರ ಏಳ್‌ಬ್ಯಾಡ್ದು ತಿಳೀತಾ್ರ..."

"ಚೆನ್ನಾಗಿದೆ ನೀವು ಹೇಳೋದು...?"

"ಕುಂಪ್ಪನಕೆರೆ ಎಸ್ರು ಕೇಳೀವಾ್ರ ?"

ಬಾಬುಗಳು ಒಂದೇ ಏಟಿಗೆ ಮಾತಿನ ವರಸೆಯನ್ನೇ ಬದಲಾಯಿಸಿದರು. ದೊಂಗಣ್ಣನವರ ವರಸೆಯೇ ಸಿನಿಮಾಸೀನರಿ ಏಕ್ ದುಡುಂ ಪಲ್ಟಾಯಿಸುವ ಹಾಗೆ. "ಗೊತ್ತು...ಗೊತ್ತು. ಫೇಲಾದ ಹುಡುಗರು ಬೀಳೋ ಕುಪ್ಪಣ್ಣನ ಕೊಳಾ ತಾನೇ?" ಎಂದ ಮುದ್ದೂರಾಯ. ಬಾಬುಗಳು ಈ ಉತ್ತರವನ್ನು ಕೇಳಿ ಕುಲು ಕುಲು ನಕ್ಕರು. ಮೂಡಶಿಖಾಮಣಿಯನ್ನು ಮೂದಲಿಸುವ ನಗೆ ಅದು.

"ಅಲ್ರೀ ಕುಪ್ಪನಕೆರೆ ಅನ್ನೋದು ಒಂದು ಊರು ಕಣ್ರಿ. ಆ ಊರ್ಗೆ ಇನ್ಸ್‌ಪೆಕ್ಟ್ರುಗಳು ಓಗೋಕೆ ಎದುರೋವ್ರು. ಸುಡುಗಾಡಿಗೆ ಟ್ರಾನ್ಸ್‌ಫರ್ ಮಾಡ್ಬುಡಿ. ಕುಪ್ಪನಕೆರೆಗೆ ಮಾತ್ರ ಒಲ್ಲೆ ಅನ್ನೋರು."

"ಯಾಕೆ...?"

"ಮರ್ಡರ್ ಕೇಸುಗೋಳು ಆ ಊರ್ನಾಗೆ ನೀರು ಕುಡಿದ ಹಾಗೆ ಆಗೋವು. ಕಾನೂನಿನ ಚೌಕಟ್ಟಿನೊಳಗೆ ಖೂನಿ ಮಾಡೋ ಮಂದಿ ಕಣ್ರಿ, ಖೂನಿ ಮಾಡ್ದೋನು ಇಂಥೋನು ಅಂತ ತಿಳಿದ್ರೂ ಅವನ್ನ ಇಡಿಯೋದು ಕಷ್ಟ ಆಗ್ಬುಡುತ್ತಿತ್ತು."

"ಅಲ್ಲಾ ಸ್ವಾಮಿ ಕಾನೂನು ಇರೋದೇ ಅಂಥೋರನ್ನ ಹಿಡಿಯೋಕೆ ಅಲ್ವೆ...?" ಮುದ್ದೂರಾಯ ಪ್ರಶ್ನಿಸಿದ.

"ಹೌದು. ಆದ್ರೆ ಕಾನೂನು ತಿಳಿದೋರೆ ಅಂಥ ಕೆಲ್ಸ ಮಾಡಿದ್ರೆ ಎಂಗ್ರಿ ಇಡಿಯೋದು?"

"ಸರಿಯೇ.. ಮುಂದೆ...?"

"ಪಾಪ ನಿಮ್ಮ ಕುಳದೋನೆ ಸಾಮಣ್ಣ ಅಂತ. ಅವನ್ನ ಇನ್ಸ್‌ಪೇಟರಾಗಿ ಬಡ್ತಿ ಕೊಟ್ಬು ವರ್ಗ ಮಾಡಿದ್ರು ಕುಪ್ಪನಕೆರೆಗೆ. ಅವನೂ ಒಳ್ಳೆ ದಿಲ್‌ದಾರ್ ಮನ್ಸ. ಯಾರಲ್ಲೂ ಎದುರೋ ಇಸು ಅಲ್ಲ ಎಲ್ಲಾ ಕಡ್ಡಿ ಎರಡು ತುಂಡು ಮಾಡ್ದಂಗೆ ಸಾಫ್‌ಸೀದಾ ಮಾತು. ಒಸ್ ಎಂಡ್ತಿ. ಒಸ್ ಚಾಕ್ರಿ ಅಂತ ಕುಸೀಲೇ ಅಲ್ಲಿಗೆ ಓದ. ನಾವು ಅನುಭೋಗಸ್ತರೆಲ್ಲಾ ಏಳಿದ್ದು ಅಲ್ಲಿಗೆ ಡಿ. ಎಸ್. ಪಿ. ಆಗಿ ಆಕಿದ್ರು ಓಗ್ಬೇಡಾ, ಅಂತ. ಆದ್ರೆ ನಮ್ಮ ಮಾತುಗೊಳ್ನೆಲ್ಲಾ ನಿರ್ಲಕ್ಷ ಮಾಡಿ ಒಂಟಿ ಓದ. ಉಡುಗ ಮುಂಡೇದು"

"ಯಾಕೆ ಏನಾಯ್ತು ಅವನಿಗೆ...?"

"ಅಲ್ಲಿನ ಖಧೀಮರೆಲ್ಲಾ ಸೇರ್ಕೊಂಡಿ ಇವನ್ಗೆ ಸಿಕ್ಸೆ ಮಾಡ್ಬುಟ್ರು."

"ಅಂದ್ರೆ ಅರ್ಥವಾಗ್ಲಿಲ್ಲ."

"ಯಾವ್ದೊ ಪಾರ್ಟಿ ವ್ಯಾಜ್ಯದಾಗಿ ಇವ ತಲೆ ಆಕ್ದ. ಇವ್ನ ತಲೇನೇ ಕೂದು ಆಕ್ಬುಟ್ರು..."

" ಛೆ...ಛೆ ಕೊಲೆ ಮಾಡ್ದೋರು ಸಿಕ್ಕಿದ್ರೊ...?"

" ಅವರೇನು ಅಡ್ಡಕಸಬಿಗರೇನ್ರಿ ಸಿಕ್ಕೋಳ್ಳೋಕೆ? ಮಸ್ತಾಗಿ ಕುಮ್ಮಕ್ಕು ಇರೋ ಮಂದಿ. ಇಲ್ಲೀಗಂಟ ಕೇಸೇ ಪತ್ತೆ ಆಗಿಲ್ಲ ಅಂತಿಟ್ಕೊಳ್ಳಿ. ಅದ್ಕೆ ಕುಪ್ಪನ ಕೆರೆಗೆ ಓಗೋಕೆ ಯಾವ ಪೋಲಿಸ್ನೋರು ಒಪ್ಪಿರಲಿಲ್ಲ. ಅಂದಾಗೆ ಈ ವಿಸ್ಯ ನಾನು ಯಾಕೆ ಏಳೋಕೆ ಬಂದೆ...? " ಎಂದು ಬಾಬುಗಳು ತಲೆ ಕೆರೆದುಕೊಂಡರು. ಕಡ್ಡಿ ತುಂಡು ಮಾಡಿದ ಹಾಗೆ ಮಾತಾಡಬಾರ್ದು ಅನ್ನೋ ವಿಷಯಕ್ಕೆ " ಎಂದು ಮಂದ್ದೂ ರಾಯನೇ ಜ್ಞಾಪಿಸಿದ.

" ಕುಪ್ಪನ ಕೆರೆ ಅಂತ ಒಂದು ಊರು ಆದ್ಮೇಕೆ ಅದ್ಕೆ ಒಬ್ಬ ಪೋಲಿಸ್ನೋನು ಇರ್ಲೇಬೇಕಲ್ಲ...."

" ಬ್ಯಾಡ್ವೆ. ಊರು ಅಂದ್ಮೇಲೆ ಹೊಲಗೇರಿ ಇರ್ಲೇಬೇಕಲ್ಲಾ" ಎಂದ ಮಂದ್ದೂ ರಾಯ, ತನ್ನ ಮಾಮೂಲು ಹಳದಿಯ ನಗೆಯನ್ನು ಚೆಲ್ಲುತ್ತಾ

" ಡಿವಿಜನ್ನಿನ ಡಿ. ಎಸ್. ಪಿ. ಗೋಳು ಕುಪ್ಪನ ಕೆರೆಗೆ ಯಾರನ್ನ ಒಗೆಯೋದು ಅಂತ ತನಿಖೆ ಮಾಡ್ಲಿಕ್ಕೆ ಸುರು ಮಾಡಿದ್ರು.

ಎಲ್ರೂ ನಾನೊಲ್ಲೆ ತಾನೊಲ್ಲೆ ಅಂದಾಗ ನನ್ನೂ ಕೂಗಿ ಕೇಳಿದ್ರು. ನಾನು ಏನಂದೆ ಗೊತ್ತೆ...?"

" ಏನಂದ್ರಿ? ಆಗೋದಿಲ್ಲ ಅಂತ ತಾನೆ ?"

" ಅದೇ ನಿಮ್ದು ತಪ್ಪು. ಸ್ವಾಮಿ ನೀವು ಎಲ್ಲಿಗೆ ವರ್ಗ ಮಾಡಿದ್ರೂ ನಾನು ತಯಾರಾಗಿವ್ನಿ. ಕುಪ್ಪನಕೆರೆಗೆ ಓಗ್ಲಿಕ್ಕೆ ನಾನು ಮೊದಲಿಂದ್ಲೂ ರೆಡಿಯಾಗಿವ್ನಿ. ತಾವು ದಯಮಾಡಿ ವರ್ಗ ಮಾಡಿಸ್ಬೇಕು ಅಂತ ಅಂದೆ..."

" ಅಯ್ಯೋ ಹಾಗ್ಯಾಕಂದ್ರಿ ? ಆಗ ನಿಮಗೆ ಮಂದುವೆ ಆಗಿರಲಿಲ್ವೆ ?"

" ಮಂದುವೆಯೂ ಆಗಿತ್ತು. ಮಕ್ಳೂ ಇದ್ವು ನನಗೆ ಅಲ್ಲಿಗೆ ಓಗ್ಲಿಕ್ಕೆ ಸುತರಾಂ ಇಷ್ಟಾನು ಇರ್ನಿಲ್ಲ "

" ಮತ್ತೇನು. ನಿಮಗೇನಾದ್ರೂ ಬುದ್ದಿ ಪಲ್ಲಟವಾಗಿತ್ತೆ?" ಎಂದು ಮಂದ್ದೂ ರಾಯ ಖಾರವಾಗಿ ಕೇಳಿದ. ಬಾಬುಗಳ ವಿಪರೀತ ಬುದ್ಧಿವಂತಿಕೆಯು ಅರಿವಾಗದೆ.

" ಅದ್ಕೆ ನಾನು ಏಳಿದ್ದು, ಯಾವ್ದಕ್ಕೂ ಒಲ್ಲೆ ಅನ್‌ಬ್ಯಾಡ್ದು ಅಂತ "

" ಸರಿ ನಿಮ್ಗೆ ವರ್ಗ ಆಯ್ತೋ ?"

" ವರ್ಗ ಯಾಕೆ ಆಯ್ತದೆ ?"

" ಅಲ್ರೀ ಯಾರೂ ಸಿಕ್ಕದಿದ್ದಮೇಲೆ, ನೀವೂ ಒಪ್ಪಿಕೊಂಡ ಮೇಲೆ ವರ್ಗ ಮಾಡದೆ ಇರ್ತಾರ್ಯೇಂದ್ರೆ. ನೀವೇನು ಹುಡುಗಾಟ ಆಡ್ತಿದೀರಾ ಹೇಗೆ" ಎಂದ ಮಂದ್ದೂರಾಯ ರಂಗಿನಲ್ಲಿ.

" ಆದ್ಕೆ ನೀವು ಇನ್ನೂ ಪೋಲೀಸ್ನೋರ್ನ ಸರಿಯಾಗಿ ಸ್ಟಡಿಮಾಡಿಲ್ಲ ಅನ್ನೋದು. ಅಲ್ರಿ ಎಲ್ರೂ ಆ ಊರಿಗೆ ಓಗೋಲ್ಲ ಅನ್ನೋವಾಗ, ನಾನು ಅನುಭವಸ್ತನಾದೋನು ಅಲ್ಲಿಗೇ ಕುಸಿಯಾಗಿ ಓಗ್ತೀನಿ ಅಂದ್ರೆ ಡಿ. ಎಸ್. ಪಿ ಗೋಳ್ಗೆ ಅನುಮಾನ ಬರೋಕಿಲ್ವ. ಕುಪ್ಪನ ಕೆರೇಲಿ ನಂಗೆ ಪಾರ್ಟಿಗೋಳಿಲ್ಲಾ ಸೈದಾಗಿ ಗೊತ್ತಿರ್ಬೋದು. ನಾನು ಲಂಚ ರುಷುವತ್ತು ತಕ್ಕೊಂಡು ಬ್ಯಾಗ್ನೆ ದೊಡ್ಡ ಮನ್ಸ ಆಗೋಗ್ಬಿಡಬೋದು. ಅಂತ ಲೆಕ್ಕಾಚಾರ ಆಕ್ಕೊಂಡಿ, ಒಳ್ಳೆ ಅಂತಿದ್ದೋನ ಒಬ್ನ ಅಲ್ಲಿಗೆ ಆಕ್ಬುಟ್ಟು, ನನ್ನ ಡ್ರಾಪ್ ಮಾಡ್ಬುಟ್ರು ..."

" ಚೆನ್ನಾಗಿದೆ ಆಡಳಿತ ! "

" ಈ ಚಾಕ್ರಿನಲ್ಲೇ ಅಂಗ್ರಿ. ಚಂಡಿ ಕಥೆ ಇದ್ದ ಹಾಗೆ ನಾನೇನಾರ ಓಗೋಕಿಲ್ಲ ಅಂದಿದ್ರೆ ನನ್ಗೆ ಎತ್ತಂಗಡಿ ಮಾಡ್ಬಿಡೋರು. ಆದ್ರಿಂದ ಯಾವ್ದಕ್ಕೂ ಆಗೋಕಿಲ್ಲ ಅನಾಬ್ಯಾಡ್ದು. ಮುನಿಯ ಇಸ್ಯಕ್ಕಲ್ಲ ನಾನು ಇಷ್ಟು ರಾಮಾಣ್ಯ ನಿಮಗೆ ಏಳ್ದೆ..."

" ಹೌದು " ಎಂದು ಕೋಲೆ ಬಸವನಂತೆ ತಲೆಯಾಡಿಸಿದ ಮಂದ್ದೂರಾಯ.

" ಈಟೊತ್ಗೆ. ಮುನಿಯುನ್ಗೆ ಅಣ ಇಲ್ಲ ಅಂತ ಏಳಿದ್ದು ತಪ್ಪು ಅಂತ ಮನವರಿಕೆ ಆಗಿರ್ಬೋದು ನಿಮ್ಗೆ. ಅವನೂ ನಿಮ್ಮಂಥೋರ್ನ ಕೇಳ್ದೆ ಇನ್ನ್ಯಾರ ತಾವು ಕೇಳ್ತಾನ್ರಿ ಅಲ್ರೀ ಅವನ್ಗೆ ಬರೋ ಸಂಬಳದಾಗೆ ಅವನು ಎಂಗ್ರಿ ಸಂಸಾರ ನಿಭಾಯ್ಸೋದು. ನೋಡಿ. ಮಂತ್ರಿಗೋಳು ಪೇಪರ್ನಾಗೆ ಏಳವ್ರಲ್ಲ. ಪೋಲೀಸ್ನೋರ್ಗೆ ಸಂಬಳ ಕಮ್ಮಿ. ಅವರ ಸಂಬಳಾನ ಎಚ್ಚಿಸ್ಬೇಕು ಅಂತ "

" ಅದಕ್ಕೆ...? "

" ಅವರು ಸಂಬಳ ಎಚ್ಚಿಸೋಗಂಟ ನಿಮ್ಮಂಥೋರು ಎಲ್ಪ್ ಮಾಡ್ಬೇಕು..." ಎಂದು ನುಡಿದು, ಸೆಂಟ್ರಿ ಮುನಿಯನನ್ನು ಒಳಗೆ ಕರೆದು " ಮಂದ್ದೂರಾವ್ ನಾಳೆ ನಿಂಗೆ ಅತ್ತು ರೂಪಾಯಿ ಕೊಡ್ತಾರೆ. ಇನ್ಮೇಕೆ ಅವರ್ಗೆ ಸಲಾಂ ತಪ್ಪಿಸಬ್ಯಾಡ" ಎಂದು ಅಪ್ಪಣೆ ಕೊಡಿಸಿದರು. ಮುನಿಯ ಹಿಗ್ಗಿದ ಮುಖದಿಂದ ಅಟೆನ್ಷನ್ನಾಗೆ ಬಂದು ಅಡ್ವಾನ್ಸಾಗಿಯೇ ಮುದ್ದೂರಾಯನಿಗೆ ಸಲಾಂ ಹಾಕಿದ ದೃಶ್ಯವನ್ನು ದೊಂಗಣ್ಣಬಾಬುಗಳು ತುಂಟ ನಗೆಯೊಡನೆ ಈಕ್ಷಿಸಿದರು. ದೊಂಗಣ್ಣಬಾಬುಗಳ ಹಿತ ನುಡಿಯನ್ನು ಮುದ್ದೂರಾಯ ಮಂಕು ಮುಖದೊಡನೆ ಮೆಲಕು ಹಾಕಿದ.

—ಕೆ. ಎನ್. ಕಿಟ್ಟಿನ್

ಹೋಂ ರೂಲ್ ಡೆMOCKERಸಿ

ಹೊಟ್ಟೇಲಿ ತಾಳ ಹಾಕೋದು ತಾಳ್ದೆ ಪಾರೂ...ಪಾರೂ...ಅಂತ ಕೂಗ್ದೆ. ಬಂದೇ ಬಿಟ್ಳು ವಂಹರಾಯ್ತಿ, ಕೈಲಿ ಅಡಿಗೆ ಸೌಟಂ ಹಿಡಿದಂ, "ಏನ್ರೀ ನಿಮ್ಮ ಗಲಾಟೆ Dont call me in short name ಅಂತ" (ಲೋಕ ಸಭೇಲಿ ಅನ್ ಪಾರ್ಲಿಮೇಂಟರಿ ಪದ ಉಪಯೋಗಿಸಿದಾಗ ಸ್ಟ್ರಾಂಗ್ ಅಬ್ಜೆಕ್ಷನ್ ಮಾಡಿದ್ಹಾಗೆ)

ನಮ್ಮ ಮನೇಲಿ ಲೋಕ ಸಭೆ ತರಹ ಒಬ್ಬ ಸ್ಪೀಕರ್ ಇದ್ದಿದ್ದರೆ ಅವಳಂ ಬಂದು ಉತ್ತರ ಹೇಳಿದ್ದು ಗಲಾಟೆಯೋ ವಾ ನಾನಂ ಕರೆದಿದ್ದು ಗಲಾಟೆಯೋ ಅಂತ ಕೇಳುತ್ತಿದ್ದ. ನನಗಿನ್ನು ಗ್ರಹಚಾರ ಕೂಡಿಬಂದಿಲ್ಲ. ಈ ಫಿಮೇಲ್ ಪ್ಲಾನಿಂಗ್ ಡೇಸ್‌ನಲ್ಲಿ ಮದುವೆ ಆಗಿ ಒಂದೂವರೆ ವರುಷ ಆದರೂ ನ್ಯಾಯ ಹೇಳೋ ಮರಿ ಹುಟ್ಟಿಲ್ಲಿಲ್ಲಂದರೆ. ಯಾವ ನ್ಯಾಯ ನೀವೇ ಹೇಳಿ. ಹುಟ್ಟಿದ್ದರೂ ಎಳಸು, ಅವಳ ಕಡೇನೆ ಹೇಳೋದು. ಅದಂ ನಿಜಾನ್ನಿ. ರೂಲಿಂಗ್ ಯಾವಾಗಲೂ ರೂಲಿಂಗ್ ಪಾರ್ಟಿ ಕಡೇ ಇರಬೇಕೂಂತ.

ನಮ್ಮ ಗೃಹ ಗವರ್ನ್ಮೆಂಟು ಪ್ಯೂರಲಿ (Poorly) ಡೆಮಾಕ್ರೆಟಿಕ್. ಅವಳೇ ರೂಲಿಂಗ್ ಪಾರ್ಟಿ, ನಾನೇ ಅಪೊಜಿಷನ್. ಅವಳೇ ಏಕೆ ರೂಲಿಂಗ್ ಪಾರ್ಟಿ ಅಂತಿರಾ! ಪ್ರಜಾರಾಜ್ಯ ಬರೋಕ್ಮುಂಚೆ, ನನ್ನ ಸ್ವಾತಂತ್ರ್ಯನ ನಮ್ಮಮ್ಮ ನಮ್ಮಪ್ಪ ಹಿಡಿದಿದ್ದರಂ. (ಕಪಿಮುಷ್ಟಿಯಲ್ಲೇ ಅನ್ನಿ ನಮ್ಮಪ್ಪನಿಗೆ ವಯಸ್ಸಾಗತಾ ಬಂದ ಹಾಗೆ, ಲಾರ್ಡ್ ರಿಪ್ಪನ್ ತರಹ ಆಗಿಬಿಟ್ಟು, ಹುಡುಗ ವಯಸ್ಸಿಗೆ ಬಂದಿದಾನೆ ಅಂತ ಡಿಕ್ಲೇರ್ ಮಾಡ್ದ ಅದೆ ಸಮಯಕ್ಕೆ ಸರಿಯಾಗಿ, ನಮ್ಮಾವ, ನಿಮ್ಮ ಮಗನ ಸ್ವಾತಂತ್ರ್ಯ ನನ್ನ ಮಗಳ ಕೈಲಿ ಕೊಟ್ಟು, ಧಾರೆಯೆರದ್ಬಿಡಿ ಅಂತ ಮಹಾತ್ಮ ತರಹ. ಸತ್ಯಾಗ್ರಹ ಹೂಡಿ. ರೌಂಡ್ ಟೇಬಲ್, ಸ್ಕ್ವೈರ್ ಟೇಬಲ್ ಕಾನ್ಫರೆನ್ಸ್ ಮಾಡಿ ಬೇಡಿಕೊಂಡರಂ, ನಮ್ಮಮ್ಮ ಸ್ವಾತಂತ್ರ್ಯ ನನ್ನ ಸ್ವಂತದ್ದಾದ್ರೂ, ಇವಳೂ ಅಂದರೆ ಪಾರೂ ಕೈಲಿ ಕೊಡೋ ಹಾಗಿದ್ದಗೆ ನನಗೂ ಪಾಕಿಸ್ತಾನದಂತೆ ಒಂದು ಭಾಗ ಕೊಡಿ ನಾನಂ ಸ್ವತಂತ್ರ್ಯವಾಗಿರುತ್ತೀನಿ ಅಂತ ಜಿನ್ನಾ ಸಾಹೇಬರ ತರಹ ಹಟ ಹಿಡಿದಳು ಪಾರೂ—ಅಮ್ಮನ ಸ್ನೇಹ ಈಗಲೂ, ಭಾರತ-ಪಾಕಿಸ್ತಾನದ ತರಹ ಸಿಹಿ.

ನಮ್ಮ ಮಾವ, ನನ್ನ ಇಂಡಿಪೆಂಡೆನ್ಸ್ ಪಾರೂಗೆ ಕೊಡಸೋಕೆ ಬಹಳ ಕಷ್ಟಪಟ್ಟ. ನಮ್ಮಪ್ಪ ಕಳ್ಳೆಕಾಯಿ ತಿನ್ನೋಕೆ ವಾಕಿಂಗ್ ಹೋದರೆ, ಅವರು ಆ ಸಮಯ ಕಾದು

ಕಳ್ಳೇಕಾಯಿ ಕೊಂಡು, " I want independence of your son for my daughter " ಅಂತ ಸ್ಲೋಗನ್ ಹೇಳ್ಕೊಂಡೆ ಹಿಂಬಾಲು ಬೀಳೋರು. ಇದಕ್ಕೂ ಜಗ್ಗಲಿಲ್ಲ ನಮ್ಮಪ್ಪ. ಕೊನೆಗೆ ನಮ್ಮ ಮಾವ ಒಂದು ದಿನ ನಮ್ಮನೇಲಿ ಊಟ ಮಾಡೋವರೆಗೂ ಉಪವಾಸ ಸತ್ಯಾಗ್ರಹ ಹೂಡಿದರು. ಅವರಿಗೆ ಬೇಕಾದ್ದು ಟ್ರಾನ್ಸ್‌ಫರ್ ಆಫ್ ಪವರ್ ಅಂತೆ. ನಾನು ಸಮಯ ಸಾಧಿಸಿ, ಹೋಗಲಿ ಬಿಡಪ್ಪ ಪಾಪ ಉಪವಾಸ ಸಾಯ್ತಾರೆ, ಅದಲ್ಲದೆ ನನಗೂ ಚೇಂಜ್ ಆಫ್ ಒಡೆಯ ಬೇಕು ಅಂದೆ. ನಮ್ಮಪ್ಪ ಜಗ್ಗಲೇ ಇಲ್ಲ. ಸರಿ, ನಾನು ಹೈಕೋರ್ಟ್ ಅಂದರೆ ನಮ್ಮಮ್ಮನ ಹತ್ತಿರ ಹೋಗಿ ಅಪೀಲು ಮಾಡ್ದೆ, ತಕ್ಷಣ ಜಬಿಂ (Quash) ಆರ್ಡರ್ ಹೊರಟಿತು ಸರಿ ಓಲಗ ಊದೋದೇ ತಡ, ನನ್ನ ಹ್ಯಾಂಡ್ over ಪಾರೂ ಟೇಕ್ over ಆಯ್ತು. ತಾಳಿ ಅವಳು ಕಟ್ಟಿದಳೋ ನೀವೋ ಅಂತ ಕೇಳಿ ನನ್ನ ಇಕ್ಕಳಕ್ಕೆ ಸಿಕ್ಕಿಸಬೇಡಿ

ಬಡ ಭಾರತ ಮಾತೆ ತರಹ ನಾನು ಇವಳ ಕೈಲಿ ಸಿಕ್ಕುಬಿದ್ದೆ. ಅವಳೇ ರೂಲಿಂಗ್ ಪಾರ್ಟಿ, ನಾನೇ ಅಪೋಜಿಷನ್. ಹೊಟ್ಟೇಲಿ ಕಿರಿತಾ ಇದೆ, ಊಟಕ್ಕೆ ಏನಾದರೂ ಇದೆಯೇನೆ ಅಂದೆ. ಇದೆ PL 480 under ನಲ್ಲಿ ಬಂದ ಅಮೇರಿಕನ್ ಗೋಧಿ ಚಪಾತಿ, ಅಮೇರಿಕನ್ Rice ನ ಅನ್ನ, ಹುಳಿಗೊಜ್ಜು ಬೇಗ ತಿನ್ನ ಬನ್ನಿ ಎಂದಳು. ಗೊಬ್ಬರಾನೋ ಗೋಧಿನೋ ಹೊಟ್ಟೆ ಉಬ್ಬರಕ್ಕಾದರೂ ತಿನಬೇಕಲ್ಲ ಅಂತ ಹೊರಟೇಬಿಟ್ಟೆ, ಹುಳಿ ಗೊಜ್ಜು ತಿನ್ನೋಕೆ.

—ಕು. ಪ್ರಿ.

ಧಾರಣೆವಾಸಿ

ಗಗನದೆಡೆಗೇರುತಿದೆ—
ಧಾರಣೆವಾಸಿ
ಜೇಬಿನಡಿಗಿಳಿಯುತಿದೆ—
ಹಣದ ರಾಶಿ
ಮಾಡಿ ಫಲವೇನು—
ಚೌಕಾಸಿ !

—ಬಿ. ಸ. ಮೂರ್ತಿ

ಭವಿಷ್ಯ

ಅಂತೂ ಹಳೆಯ ಕತೆಯೊಂದರ ನೆನಪಾಗುತ್ತದೆ.

ಬಹಳ ವರ್ಷಗಳವರೆಗೆ ಕಷ್ಟಪಟ್ಟವನೊಬ್ಬ ತನ್ನ ಕೈಯನ್ನು ಜ್ಯೋತಿಷಿಯೊಬ್ಬನಿಗೆ ತೋರಿಸಿದನಂತೆ. ಬಹಳ ಹೊತ್ತು ಅವನ ಕೈಯನ್ನು ಪರೀಕ್ಷಿಸಿ ಆತ,

"ಮಹನೀಯರೆ, ಇನ್ನೂ ಹತ್ತು ಹನ್ನೆರಡು ವರ್ಷಕಾಲ ನೀವು ಕಷ್ಟವನ್ನು ಅನುಭವಿಸಬೇಕಾಗುತ್ತೆ"...ಎಂದು ಹೇಳಿ ನಿಲ್ಲಿಸಿದನಂತೆ.

ಆ ಮಹನೀಯ ಉತ್ಸುಕತೆಯಿಂದ ಕೇಳಿದ 'ಆಮೇಲೆ ?'

'ಆಮೇಲೆ ಅದು ನಿಮಗೆ ಅಭ್ಯಾಸವಾಗಿ ಒಗ್ಗಿಬಿಟ್ಟಿರುತ್ತದೆ'

ಇದನ್ನೆ ನೋಡಿ ಕಾಪಿ ಮಾಡಿದರೋ ಏನೋ ಅನ್ನಿಸುತ್ತೆ. ಒಂದು ಹೊಸ ಬ್ಲೇಡಿನ ತಯಾರಕರು. ಅಂಗಡಿಯವನ ಶಿಫಾರಸಿನಂತೆ ಹೊಸ ಬ್ಲೇಡೊಂದು ಹೇಗಿದೆಯೋ ನೋಡೋಣವೆಂದು ತೆಗೆದುಕೊಂಡೆ 'ರಾಜ' ಅದರ ಹೆಸರು. ಬೆಲೆಯೇನು ಕಡಿಮೆಯಿಲ್ಲ. ಇತರೇ ಬ್ಲೇಡುಗಳಿಗಿಂತ ದುಬಾರಿಯೇ! ಅದರ ಸುತ್ತು ಕಾಗದದಮೇಲೆ ಬರೆದಿದ್ದ ಸೂಚನೆ ಓದಿದೆ.

ಮೊದಲಸಾರಿಗೆ ಷೇವು ಅಷ್ಟೇನೂ ಚೆನ್ನಾಗಿರುವುದಿಲ್ಲ ನಿಜ. ಆದರೆ ಹತಾಶರಾಗಬೇಡಿ ಎರಡು ಮೂರನೆಯ ಷೇವುಗಳು ಮತ್ತೂ ಚೆನ್ನಾಗಿರುತ್ತವೆ.

ಸರಿ! ನೋಡೋಣವೆಂದು ಮೊದಲನೆಯ ಸಾರಿ ಆ ಹೊಸ ಬ್ಲೇಡಿನಿಂದಾದ ಕೆನ್ನೆ ಧಾಡಿಗಳ ಉರಿಯನ್ನು ಸಹಿಸಿಕೊಂಡೆ. ಎರಡನೆಯ ಮೂರನೆಯ ಸಾರಿ ಧೈರ್ಯದಿಂದ ಇನ್ನುಮೇಲೆ ಒಳ್ಳೆಯ ಷೇವು ಬರಬಹುದೆಂದು ಹಲಸಾದ ಬೆಳೆ ಹದನಾಗಿ ಕತ್ತರಿಸಬಹುದೆಂದು ಸುಮ್ಮನಿದ್ದೆ.

ಸರಿ ಮೂರನೆಯದಿನ ಅದೇಕಡೆ ಮೂರನೆಯ ದಿನವೂ ಅಷ್ಟೆ. ಕೆರೆತ ಉರಿತ ನಿಲ್ಲಲಿಲ್ಲ. ಹಳೆಯ ಗಂಡನ ಪಾದವನ್ನೆ ಹಿಡಿದೆ ಜೈ ಭಾರತ್ ಎಂದು!

ಬಿ. ನ. ಮೂರ್ತಿ

ದಪ್ಪ ಆಗೋದು ಹೇಗೆ?

(ಕಾಂಗ್ರೆಸ್ ಸೇರು)

ನನ್ನನ್ನೆಲ್ಲಾ "ಕಡ್ಡಿ ಪೈಲ್ವಾನ್" ಸೆಣಕಲ ಕಡ್ಡಿ" ಸಿಳ್ಳೇಕ್ಯಾತ" "ಊದುಗಡ್ಡಿ" "ದಪ್ಪ ಆಗಬಾರದೇ ಏಕೆ ಹಿಗೀದೀಯಾ" ಅಂತ ಸಣ್ಣಪುಟ್ಟ ಒಂದು ತರಹ ಬೈಗಳ ಅನ್ನಿ ಇಲ್ಲ ಆಟಂ ಬಾಂಬ್‌ಗಳನ್ನಿ ಕೊಂಕು ನುಡಿಗಳಿಂದ ಟಾಂಟ್ ಮಾಡಿದರು.

ಹೇಗಾದ್ರೂ ಮಾಡಿ ನನ್ನ ಶರೀರ ದಪ್ಪ ಮಾಡ್ಕೋಬೇಕು ಅಂತ ನಾನಾ ಪ್ರಯೋಗಗಳನ್ನು ಶುರು ಮಾಡ್ದೆ.

ಒಬ್ಬರು "ಕಡ್ಲೇಕಾಳು ಹಿಂದಿನ ದಿನ ರಾತ್ರಿ ನೆನೆಹಾಕಿ ಆದನ್ನ ಬೆಳಗ್ಗೆ ಎದ್ದ ಕೂಡ್ಲೆ ಕೋಳಿಗಳು ಕಾಳು ತಿನ್ನೋಹಾಗೆ ಗಬಕ್ ಗಬಕ್ ಅಂತ ತಿಂದರೆ ದಪ್ಪ ಆಗ್ತಿ" ಎಂದು ಹೇಳಿದರು

"ಎರಡು ಬೇರೆ ಬೇರೆ ಹಸು ಹಾಲನ್ನು ಎರಡು ಬೇರೆ ಬೇರೆ ಎಮ್ಮೆ ಹಾಲಿಗೆ ಬೆರಸಿ ಚಟ ಚಟ ಚಟ ಚಟಾರು (ಏಕೆಂದರೆ ನಾಲ್ಕು ಪ್ರಾಣಿಗಳಿವೆ) ಅದಕ್ಕೊಂದು ಚಟಾಕು ಆಡಿನ ಹಾಲನ್ನು ಬೆರಸಿ ಬೆಳಿಗ್ಗೆ ಎದ್ದು ಊದಾ ಬಣ್ಣದ ಹಸೂನೇ ನೋಡ್ತಾ ಎರಡು ತಿಂಗಳು ಕುಡಿದರೆ ಊದ್ತೀಯಾ" ಎಂದರು ಇನ್ನೊಬ್ಬರು.

"ದಿನಾ ಎರಡೆರಡು ಮೊಟ್ಟೆ ತಿಂದು ಅಂಗಸಾಧನೆ ಮಾಡಿದರೆ ಸರಿ ಹೋಗ್ತೀಂದ್ರು" ಇನ್ನೊಬ್ಬ ಮಹಾನುಭವಿ.

"ನೋಡಪ್ಪಾ ಆನೆ ಹಾಗೆ ಆಗ್ಬೇಕಾದ್ರೆ ಆನೇ ತಿನ್ನೋ ಹುಲ್ಲು, ಕಬ್ಬು ಸಿಪ್ಪೆ ಸಮೇತ ತಿನ್ನು" ಎಂದವ ಇನ್ನೊಬ್ಬ. ಇದನ್ನು ಮಾಡಿ ನನ್ನ ಹಲ್ಲು ಮುರಿಕ್ಕೊಂಡಾಯಿತ್ತು.

ದಿನಾ ಬೀದೀಲಿ ಕೆಲವರು ದಪ್ಪದಪ್ಪಗೆ ಹೋಗ್ತಾ ಇರ್‍ತಾರಲ್ಲ ಅವರನ್ನು ಹಿಡಿದು ನಿಲ್ಲಿಸಿ (ಅಬ್ಬಾ! ಹಿಡಿದು ನಿಲ್ಲಿಸಿ!) ಅವರು ಏನೇನು ಮಾಡ್ತಾರೆ? ಏನು ತಿಂತಾರೆ? ಅವರ ದಿನಚರಿ ಏನು? ಅವರ ಪ್ಕೈ ಪಕ್ಕ ನಾನೂ ನಿಂತರೆ osmotic pressure ಪ್ರಕಾರ ನಾನೂ ಊದುತ್ತೇನೆಯೇ? ಇವೆಲ್ಲಾ ಪ್ರಶ್ನೆ ಕೇಳಲೇ ಎಂದೆನಿಸುತ್ತದೆ. ಆದರೆ ಅವರ ಶರೀರ ನೋಡಿ ಅಕಸ್ಮಾತ್ ಅವರು ನನ್ನಮೇಲೆ

ತಿರುಗಿ ಬಿದ್ದು "ಫ್ಲಟ್" ಅಂತ ಹೊಡೆಸಿಕೊಂಡು ಇರೋ ಹಲ್ಲನ್ಯಾಕೆ ಮುರಿಸಿಕೊಳ್ಳಲಿ ಎಂದು ನನಗೆ ನಾನೆ ಸಮಾಧಾನಿಸಿಕೊಂಡು ರಸ್ತೆ ಅಂಚಿನಲ್ಲಿ ಹೊರಟು ಹೋದೆ.

ನನ್ನ ಸ್ನೇಹಿತ ಮನಶ್ಶಾಸ್ತ್ರಜ್ಞನೊಬ್ಬ ಹೇಳಿದ :—

"ನೀನು ಇನ್ಮೇಲೆ ಸಣ್ಣಕ್ಕಿರೋದನ್ನ ನೋಡಬೇಡ (ಉದಾಹರಣೆ ; ಮುಡಿಕೋಲು, ನುಗ್ಗೇಕಾಯಿ ಇತ್ಯಾದಿ) ಸಣ್ಣಕ್ಕಿರೋರ ಜೊತೆ ಮಾತನಾಡಬೇಡ, ದಪ್ಪಕ್ಕಿರೋದನ್ನೇ ತಿನ್ನು. ಹೇಗಾದರೂ ಮಾಡಿ ದಪ್ಪ ದಪ್ಪಗಿರೋರ ಸ್ನೇಹ ಬೆಳಸು. ಸಣ್ಣಕ್ಕಿರೋರನ್ನ ಹತ್ರ ಸೇರಿಸ್ಬೇಡ. ಅಂತಹವರ್ಯಾರಾದರೂ ಬಂದರೆ ಒಂದು ಮೈಲಿ ಓಡ್ಹೋಗು. ಮನೇಲೆಲ್ಲಾ ಕುಂಬಳ ಕಾಯಿ ನೇತ್ಹಾಕು. ನೀನು ಎಲ್ಲಿ ತಿರುಗಿದ್ರೆ ಅಲ್ಲಿ ಕುಂಬಳಕಾಯಿ ಕಾಣೋ ಹಾಗೆ ಮಾಡು. ಬೆಳಿಗ್ಗೆ ಎದ್ದ ಕೂಡ್ಲೆ ಕುಂಬಳಕಾಯಿ ನೋಡು. ಅದಕ್ಕೆರಡು ನಮಸ್ಕಾರ ಹಾಕು. ದೇವರ ತಲೇಮೇಲೆ ಹೂವಿಡೋಬದಲು ಒಂದು ಕುಂಬಳಕಾಯನ್ನೇ ಇಡು ಬೇಕಾದ್ರೆ, ದಿನಾ ದೊಣ್ಣೆ ಮೆಣಸಿನಕಾಯಿ ತಿನ್ನು. ಹೋಟಲಿಗೆ ಹೋದ್ರೆ ಇಡ್ಲಿ ತಿನ್ನು ಮನೇಗೆ ಬಂದು ಕಡುಬು ತಿನ್ನು. ಆಗ ನಿನ್ನ ಮನಸ್ಸಿನಲ್ಲಿ "ದಪ್ಪ" ಅನ್ನೋದು ಬೆಳೀತಾ, ಬೆಳೀತಾ, ಬೆಳೀತಾ ದಪ್ಪ ಆಗ್ತೀಯಾ. "ಡುಮ್ಮಣ್ಣ" ಆಗೇ ಆಗ್ತೀಯಾ ಆಮೇಲೆ ಜನ ನಿನ್ನನ್ನು "ಆನೇಮರಿ" ಡುಮ್ಮಣ್ಣ "ಡಬ್ಬಲ್ ಸೀಟ್ ಬೊಂಡಾ" "ಡಬ್ಬು" ಇವೇ ಮುಂತಾದ ಆಟಂಬಾಂಬ್‌ಗಳಿಂದ ನಿನ್ನನ್ನ ಕರೆಯುತ್ತಾರೆ." ಹೀಗೆಲ್ಲಾ ಹೇಳಿ ಕುಮ್ಮಕ್ ಕೊಟ್ಟ.

ಈ ನನ್ನ ಪ್ರಯೋಗಗಳನ್ನೆಲ್ಲಾ ನನ್ನ ಮಿತ್ರ ದಪ್ಪಗಿರೋ ಡಾಕ್ಟರರಲ್ಲಿ ತಿಳಿಸಿದೆ. ನಾನೂ ಇನ್ನೂ ಸಣ್ಣಗಾಗಿದ್ದನ್ನು ಕಂಡು ಅವರು ನನ್ನ ಬೆನ್ಮೇಲೆ ಕೈ ಇಟ್ಟು "ಮೊಟ್ಟೆಯಿಂದ ಕುಂಬಳಕಾಯ್‌ವರೆಗೆ ಮಾಡೋದ್ನೆಲ್ಲಾ ಬಿಟ್ಟು ಸುಮ್ನೆ ಕಾಂಗ್ರೆಸ್ ಸೇರು" ಎಂಬೋಣವೇ !

ಹಾ. ಮೈ. ಸೂರಿ

ಪ್ರೇಮ

ಆಗಿದೆ ನಮ್ಮೊಳು ಪ್ರೇಮ
—ಎಂದರಂತೆ ಮಂಗಳು. ಅವಳ ಪ್ರೇಮಿ.
' ಹಾಗಿದ್ದರೆ ಕಟ್ಟಿ ತಾಳಿ '
—ಎಂದರಂತೆ ಅಪ್ಪ-ಅಮ್ಮ
' ಅಯ್ಯೋ ಬೇಡ ತಾಳಿ '
ಎಂದನಂತೆ ಅವಳ ಪ್ರೇಮಿ !

—ಬಿ. ನ. ಮೂರ್ತಿ

ಇಸಪೀಟಾಪುರದಿಂದ

ಆ ಊರಿಗೆ "ಇಸಪೀಟಾಪುರ" ಎಂದು ಹೆಸರಿಟ್ಟರೂ ಅತಿಶಯೋಕ್ತಿಯಲ್ಲ. ಅದೇನು "ಎಲೆಯಮ್ಮ"ನ ಆಟದ ಹುಚ್ಚೋ ಜನಗಳಿಗೆ ಬೆಳಗಿನಿಂದ ಸಂಜೆಯವರೆಗೆ ಅದೇ ಕೆಲಸ. ನಿರುದ್ಯೋಗಿಗಳಿಗಂತೂ ಅದೇ ಒಂದು ಉದ್ಯೋಗ. ಅದೆಲ್ಲಾ ನೋಡಿದ ಮೇಲೆ ಬಹುಶಃ ಅವರು ಹುಟ್ಟಿದಾಗ ಕೈಯಲ್ಲಿ ಇಸಪೀಟಿನ ಎಲೆಗಳನ್ನು ಹಿಡಿದು ಕೊಂಡೇ ಹುಟ್ಟಿದರೂ ಅಂತ ಕಾಣುತ್ತೆ.

ನಾನೂ ಒಂದು ದಿನ ಒಂದು ಕೈ ನೋಡೋಣ ಅವರ ಜೊತೆಯಲ್ಲಿ ಅಂತ one of the clubsಗೆ ಹೊರಟೆ. ಪೋಲೀಸ್ ಇನ್ಸ್ಪೆಕ್ಟರು ಡ್ರೆಸ್ ಸಮೇತ ಹಾಜರಾಗಿದ್ದರು, ಮ್ಯಾಜಿಸ್ಟ್ರೇಟರೂ ಇದ್ದರು. ಎಲ್ಲಾ ಆಟವಾಡುತ್ತಿದ್ದರು.

"ಬೆಂಗಳೂರು ಸ್ವಾಮೀರು ಹೇಗಿದಾರೋ ನೋಡೋಣ" ಎಂದು ಸ್ವಾಗತಿಸಿದರು. ಕುಳಿತು ಸುಮಾರು ಹೊತ್ತು ಆಟವಾಡಿದೆ. ತೂಕಡಿಸುತ್ತಿದ್ದ ಲಕ್ಷ್ಮಿ ನನ್ನ ಮೇಲೆ ವಾಲಿದಳು. ಸುಮಾರಾಗಿ ದುಡ್ಡು ಮಾಡಿದೆ. ಹೆಚ್ಚೇನು ಇಲ್ಲ. ಒಂದು transfer case ಅಥವಾ ಸಣ್ಣ contract ಪಾಸ ಮಾಡಿಸಿಕೊಳ್ಳುವಾಗ ಇರೋ ಮಾಮೂಲಷ್ಟು ಅಷ್ಟೆ.

ಅಷ್ಟೊತ್ತಿಗೆ ಹಳೇ ಸ್ನೇಹಿತರೊಬ್ಬರು ಬಂದರು. ಬರುತ್ತಿದ್ದ ಹಾಗೆ ಎಲ್ಲರ ಎಲೇನೂ ನೋಡಿ ಯಾರಪ್ಪಾ ಖಾದಿ ಬೋರ್ಡ್ ಎಂದು ಕೂಗುಹಾಕಿದರು.

ಬೆಂಗಳೂರಿನವರಪ್ಪ ಎಂದ ಒಬ್ಬ ದುಡ್ಡು ಕಳೆದುಕೊಂಡ ಸಹೋದ್ಯೋಗಿ ಯಾಕೆ ಬಂದ ಇವಾ ಎನ್ನುವ ಧ್ವನಿಯಲ್ಲಿ.

ನನಗೇನೂ ಅರ್ಥವಾಗಲೇ ಇಲ್ಲ. ಅದೇನು code "ಖಾದಿ ಬೋರ್ಡ್"ಯಾರು ಎಂದರೆ ನನ್ನ ಕಡೆ ಯಾಕೆ ಕೈ ತೋರಿಸಬೇಕು? ಅದಕ್ಕೂ ನನಗೂ ಏನು ಸಂಬಂಧ ಎಂದು ಯೋಚಿಸಲಾರಂಭಿಸಿದೆ. ಆಟದ ಭರದಲ್ಲಿ ವಿಷಯ ತಿಳಿದುಕೊಳ್ಳಲು ಆಗಲಿಲ್ಲ.

ಎಲ್ಲಾ ಆಗಿ ಕಾಕಾ ಹೋಟಲಿನಲ್ಲಿ ರಫಿ ಖಲಾಲಿ ರೆಕಾರ್ಡ್ ಹಾಕೋ ಟೈಮ್ ಹೊತ್ತಿಗೆ ಆಟ ಮುಗಿಯಿತು. ಪಕ್ಕದವನೊಬ್ಬನನ್ನು ಖಾದಿಬೋರ್ಡ್ ವಿಷಯ ಕೇಳಿದೆ "ಅಯ್ಯೋ ಅದೇ" ಎಂದು ಮುಂದುವರಿಸಿದ "ಯಾರು ದುಡ್ಡು ಜಾಸ್ತಿ ಹೊಡೀತಾರೋ ಆಟದಲ್ಲಿ ಅವರನ್ನು ಖಾದಿ ಬೋರ್ಡ್ ಅಂತ ಕರೆಯೋವಾಡಿಕೆ" ಎಂದ, ಇವರಿಗೆ ಅದೂ ಗೊತ್ತಿಲ್ಲ ಎನ್ನುವ ಧ್ವನಿಯಲ್ಲಿ.

ಯಾರು ಯಾರಿಗೋ "ಪದ್ಮಶ್ರೀ" ಸಿಗುತ್ತಾ ಇರೋವಾಗ ಇವರಿಗೂ ಯಾಕೆ ಕೊಡಬಾರದು ಎನ್ನಿಸಿತು.

ಲೋಕೋ ಭಿನ್ನರುಚಿ

ಒಬ್ಬೊಬ್ಬರದು ಒಂದೊಂದು ವಿಧಾನ. ಒಂದು ಊರಲ್ಲಿ ಒಂದು ಕ್ರಮವಿದ್ದರೆ ಇನ್ನೊಂದು ಕಡೆಯಲ್ಲಿ ಅದರ ವಿರುದ್ಧ ರೀತಿ ನೀತಿಗಳು ಕಂಡು ಬರುತ್ತವೆ. ನಮಗೆ ಅನ್ನವಿಲ್ಲದೆ ಬೇರೆ ಊಟವಿಲ್ಲ, ಆದರೆ ಉತ್ತರ ಭಾರತದಲ್ಲಿ ಬರೀ ಗೋಧಿಯಿಂದ ಮಾಡಿದ ಚಪಾತಿ ತಿಂದು ಜನ ಜೀವಿಸುತ್ತಾರೆಂದರೆ ಕೆಲವರಿಗೆ ಆಶ್ಚರ್ಯವಾಗಹುದು. ನಮಗೆ ಅಂದರೆ ದಕ್ಷಿಣ ಭಾರತದವರಿಗೆ ಕಾಫಿ ಮೇಲಿದ್ದಷ್ಟು ಇಷ್ಟ ಉತ್ತರದವರಿಗಿದೆಯೇ ? ಅತಿಥಿಗೆಂತ ಅವರು ಕಾಫಿ ಮಾಡಿದರೆ ಪಾಯಸದಂತಿರುತ್ತದೆ. ನಮ್ಮೂರ ಹೆಂಗಸರು ಎಡಗಡೆ ಮೂಗು ಚುಚ್ಚಿಕೊಳ್ಳುತ್ತಾರೆ; ಇತರ ಹಲವಾರು ಕಡೆಗಳಲ್ಲಿ ಬಲಗಡೆಗೆ ಮತ್ತು ಕೆಲವು ಪ್ರದೇಶಗಳಲ್ಲಿ ಹೆಂಗಸರ ಮೂಗಿನ ಎರಡೂ ಕಡೆಗಳಲ್ಲೂ ಆಭರಣಗಳನ್ನು ಕಾಣಬಹುದು. ಸೀರೆ ಉಟ್ಟುಕೊಳ್ಳುವ ಕ್ರಮದಲ್ಲಿ ಎಷ್ಟು ವತ್ಯಾಸ ! ಕೂರ್ಗಿನವರ ಕ್ರಮಬೇರೆ, ಮದ್ರಾಸಿನ ಮುದುಕಿಯರ ಕ್ರಮ ಬೇರೆ, ಮೈಸೂರ ಹೆಂಗಸರದೊಂದು ತರಹ ಮತ್ತು ಗುಜರಾತಿನವರದು ಇನ್ನೊಂದು ರೀತಿ. ಜನರ ಹೆಸರಿನಲ್ಲಿ ಕೂಡಾ ಪ್ರಾಂತೀಯ ವೈಶಿಷ್ಟ್ಯ ಕಂಡು ಬರುತ್ತದೆ, ಮದ್ರಾಸಿನವರಿಗೆ ದೇವರ ಹೆಸರಿನಮೇಲೆ ಪ್ರೀತಿ ಇರುವುದರಿಂದಲೇ. ಪಾರ್ಥಸಾರತಿ, ಶಂಕರನಾರಾಯಣ, ಆರುಮುಗ, ಸ್ವಾಮಿನಾಥನರು ಆ ಕಡೆ ಬಹಳ, ಇನ್ನು ಮೈಸೂರಲ್ಲಿ, ಅದರಲ್ಲೂ ಹಳೇ ಮೈಸೂರಲ್ಲ "ಅಯ್ಯ" "ಅಪ್ಪ" ಎಂದು ಕರೆಸಿಕೊಳ್ಳುವವರೇ ಬಹಳವಾದರೆ ಉತ್ತರ ಕರ್ನಾಟಕದಲ್ಲಿ ತರಕಾರಿಗೂ ಮನುಷ್ಯರಿಗೂ ಒಂದೇ ಹೆಸರಿಡುವುದು ವಾಡಿಕೆಯಾದಂತಿದೆ. ಮೆಣಸಿನಕಾಯಿ, ಹಾಗಲಕಾಯಿ, ಕುಂಬಳಕಾಯಿ, ಎಲೆ. ಅಡಿಕೆ ಮೊದಲಾದ ಹೆಸರುಳ್ಳ ಜನರು ಈ ಕಡೆಯವರು. ಹಾಗೆ ಮತ್ತೂ ಉತ್ತರಕ್ಕೆ ಅಂದರೆ ಮಹಾರಾಷ್ಟ್ರಕ್ಕೆ ಹೋದರೆ ಪ್ರತಿಯೊಬ್ಬರ ಹೆಸರಿನಲ್ಲೂ (ಮನೆಯಲ್ಲಿಲ್ಲದಿದ್ದರೂ) ಒಂದೊಂದು "ಕಾರು" ಕಂಡುಬರುತ್ತದೆ. ಚಾಪೇಕಾರ್, ಮಣೇಕಾರ್, ವುಣಕಾರ್ ಎಲ್ಲಾ ಮಹರಾಷ್ಟ್ರದವರೆಂದು ಹೇಳಬಹುದು. ಅಂತೆಯೇ "ಅರ್ಜಿ" ದಾರರೆಲ್ಲಾ ಬಂಗಾಳದಲ್ಲಿ ಸೇರಿಕೊಂಡಂತೆ ಕಾಣುತ್ತದೆ, ಆದ್ದರಿಂದಲೇ ಮುಖರ್ಜಿ, ಬೆನರ್ಜಿ, ಎಲರ್ಜಿ, ಎನರ್ಜಿಯವರೆಲ್ಲ ಇಲ್ಲಿ ಕಾಣಿಸಿಕೊಳ್ಳುತ್ತಾರೆ.

ಒಂದು ದೇಶದಒಳಗೆ ಇಷ್ಟು ಬದಲಾವಣೆ, ವ್ಯತ್ಯಾಸ ಕಂಡು ಬರುವಾಗ ದೇಶ ದೇಶಗಳ ಜನಾಂಗದ ರೀತಿ ನೀತಿಯಲ್ಲಿ ಎಷ್ಟು ವ್ಯತ್ಯಾಸವಿರಲಾರರು. ವಿವಾಹ

ಪದ್ಧತಿಯನ್ನು ನೋಡುವ. ಒಂದು ದೇಶದಲ್ಲಿ ವರದಕ್ಷಿಣೆ ಕೊಡುವ ಕ್ರಮವಿದ್ದು ಇನ್ನೊಂದು ದೇಶದಲ್ಲಿ ಇಲ್ಲದಿರುವುದು ವಿಶೇಷವೇನಲ್ಲ. ಆದರೆ ನಮ್ಮ ದೇಶದಲ್ಲಿ ವರದಕ್ಷಿಣೆ ಎಷ್ಟು ವಾಡಿಕೆಯಲ್ಲಿದೆಯೋ ಹಾಗೆಯೇ ಆಫ್ರಿಕದ ಹಲವಾರು ದೇಶಗಳಲ್ಲಿ ವಧುದಕ್ಷಿಣೆ ಕೊಡುವ ಕ್ರಮವಿದೆ. ಇತ್ತೀಚೆಗೆ ಆಫ್ರಿಕದ ಒಂದು ಕಡೆಯಲ್ಲಿ ಯುವಕರೆಲ್ಲರೂ ಸಭೆ ಸೇರಿ ವಧುದಕ್ಷಿಣೆಯ ಮಟ್ಟ ಬಹಳ ಏರಿದೆಯೆಂದೂ ಈ " ಬೆಲೆ " ಯನ್ನು ಕಡಿಮೆ ಮಾಡಲು ಸರಕಾರವು ತಕ್ಕ ಕ್ರಮ ಕೈಕೊಳ್ಳಬೇಕೆಂದೂ ನಿರ್ಣಯಿಸಿದರು. ನಾಗರೀಕ ಜನಾಂಗದಲ್ಲಿ ಗರ್ಭಿಣಿ ಹೆಂಡತಿಯ ಪ್ರಸವ ಕಾಲದಲ್ಲಿ ಗಂಡನು ಏನು ಮಾಡುತ್ತಾನೆ? ಸ್ವಲ್ಪ ಗಡಿಬಿಡಿಯಾಗಿ ಅತ್ತಿತ್ತ ತಿರುಗಬಹುದು. ಡಾಕ್ಟರರನ್ನು ಆಗಾಗ ಪೀಡಿಸಬಹುದು ಇಲ್ಲವೇ ಹೊಗೆಬತ್ತಿಯನ್ನು ಸ್ವಲ್ಪ ಹೆಚ್ಚಾಗಿ ಸೇವಿಸಬಹುದು. ಆದರೆ ಕೆಲವು ಗುಡ್ಡಗಾಡು ಜನರ ಪದ್ಧತಿ ಪ್ರಕಾರ ಗಂಡನಿಗೆ ಇಂತಹ ಯಾವ ಚಟುವಟಿಕೆಗಳಿಗೂ ಅವಕಾಶವಿಲ್ಲ. ಬದಲು, ಹೆಂಡತಿ ಪ್ರಸವ ಶಾಲೆಯಲ್ಲಿ ನರಳುವಾಗ ಈತನೂ ಪಕ್ಕದಲ್ಲೇ ಕೂತು ಹಾಗೇ " ನರಳಬೇಕು. " ಇದರಿಂದೇನು ಲಾಭವೆಂದು ನೀವು ಕೇಳಬಹುದು. ಮಾಡಿದ್ದುಣ್ಣೋ ಮಹರಾಯ ಎಂಬಂತೆ ತನ್ನ ತಪ್ಪಿನ ಪ್ರಾಯಶ್ಚಿತ್ತ ಗಂಡನೂ ಅನುಭವಿಸುವುದು ನ್ಯಾಯವಲ್ಲವೇ ?

ಅಮೆರಿಕದ ಕೆಲವು ಕಡೆಗಳಲ್ಲಿ ಗಂಡಸರು ಮೊಣಕಾಲಿಂದ ಕೆಳಗೆ ಬಹಿರಂಗವಾಗಿ ಕಾಣಿಸಬಾರದೆಂಬ ಕಾನೂನೂ ಒಂದು ಕಾಲದಲ್ಲಿ ಪ್ರಚಾರದಲ್ಲಿತ್ತು. ಹೆಂಗಸರು ಎಷ್ಟನ್ನಾದರೂ ತೋರಿಸಬಹುದೆ ? ಹಾಗೆಂದು ತಿಳಿದು ಕೆಲವರು " ಟೋಪ್‌ಲೆಸ್ " (Topless) ಡ್ರೆಸ್ಸಿಗೆ ಪ್ರಾರಂಭಿಸಿ ಪಜೀತಿಗೆ ಬಿದ್ದರು. ಇತ್ತೀಚಿಗೆ ಅಮೆರಿಕ ಮತ್ತು ಯುರೋಪಿನ ಮಹಿಳೆಯರು ತಮ್ಮ " ಎದೆ "ಯ ಗಾತ್ರವನ್ನು ಬದಲಾಯಿಸಿಕೊಳ್ಳಲು ಪ್ಲಾಸ್ಟಿಕ್ ಸರ್ಜರಿ (Plastic Surgery) ಮಾಡಿಸಿಕೊಳ್ಳುವುದು ವಾಡಿಕೆಯಂತೆ. ಇದರಲ್ಲಿನ ಸ್ವಾರಸ್ಯವೆಂದರೆ ಯುರೋಪಿನ ಮಹಿಳೆಯರು ತಮ್ಮ " ಎದೆ "ಯ ಗಾತ್ರವನ್ನು ಸಣ್ಣದು ಮಾಡಿಕೊಳ್ಳುತ್ತಾರಾದರೆ ಅಮೇರಿಕದವರು ದೊಡ್ಡದು ಮಾಡಿಸಿಕೊಳ್ಳುತ್ತಾರಂತೆ! ಭಾರತೀಯ ಮಹಿಳೆಗೆ ಇದನ್ನು ನಂಬುವುದೇ ಕಷ್ಟವಾದೀತು–ಸದ್ಯಕ್ಕಾದರು.

—ಉಮಾಕಾಂತ

ಪೂರ್ವ ಪಾಕಿಸ್ಥಾನದಲ್ಲಿ ಸ್ವಯಂ ಆಡಳಿತದ ಚಳುವಳಿ ಬಿರುಸಾಗಿದೆಯಂತೆ.

—ಭುಟ್ಟೋ ನಿರ್ಗಮನದಿಂದ ತಣ್ಣಗಾಗುತ್ತೆ ಎಂದಿದ್ದವರಿಗೆ ನಿರಾಸೆಯಂತೆ.

* * * *

ಎರಡು ಮಾತ್ರೆ

ರೀಕ್ ಶಾಕ್ ಆಗಿದ್ದ. ಆದರೂ ಕುಂಟುಕೊಂಡು ಬಂದಿದ್ದ. "ಏನಾಗುತ್ತಪ್ಪಾ! ನೋಡುಕ್ಕೆ ಲಕ್ಷಣವಾಗಿದ್ದೀಯಲ್ಲ" ಎಂದು ಅನುಕಂಪ ತುಂಬಿದ ದನಿಯಿಂದ ಕೇಳಿದೆ. ಲಕ್ಷ್ಮಿ ಎದುರು ಬಂದಾಗ ನಾವು ಅನುಕಂಪ ಕೋರಿದರೆ ನಮ್ಮನ್ನೂ ಆಕೆ ಬಲಿಯುವುದುಂಟು.

"ನೋಡಿ, ಡಾಕ್ಟರೇ! ಆಗಿಂದಾಗ್ಗೆ ಮಂಡಿ ನೋವು ಬರುತ್ತೆ. ಎರಡು ಬೆಟ್ನಲಾನ್ ಮಾತ್ರೆ ನುಂಗಿದರೆ ಬೆಳಗಾಗುವ ಹೊತ್ತಿಗೆ ಸರಿಹೋಗುತ್ತೆ. ಎರಡು ಮೂರು ವರ್ಷಗಳಿಂದ, ಮೂರು ನಾಲ್ಕು ತಿಂಗಳೀಗಳಿಗೆ ಬರೋದುಂಟು. ಈ ಸಾರ್ತಿ ಕಡಿಮೆ ಆದಹಾಗಿಲ್ಲ. ಸ್ವಲ್ಪ ಪರೀಕ್ಷೆ ಮಾಡಿ, ಚಿಕಿತ್ಸೆ ಮಾಡ್ತೀರಾ" ಅಂತ ಹೇಳಿ ಹತ್ತು ರೂಪಾಯಿ ನೋಟು ಇಟ್ಟ. ಹಣ ಮೊದಲು ಕೊಟ್ಟರೆ ಕಾಯಿಲೆ ವಾಸಿಯಾಗುಲ್ಲ ಅಂತ ನನ್ನ ಅನುಭವ. ಡಾಕ್ಟರಿಗೆ ದಗ ಹಾಕಿದರೇ ರೋಗ ಗುಣವಾಗೋದು. ಅದಕ್ಕೇ ಆ ನೋಟನ್ನು ಮುಟ್ಟದೆ, ಅದರಮೇಲೆ ಡೈರಿಯನ್ನು ಇಟ್ಟು ಮುಚ್ಚಿದೆ. ಹಣ ಕೊಟ್ಟಾಗ ಕಾಲು ಹಿಡಿದು ಸೇವೆ ಮಾಡೋದರಲ್ಲಿ ತಪ್ಪೇನು? ಅವನ ಕಾಲು ಹಿಡಿದು ಬೂಡ್ಸ ಕಳಚಿದೆ. ಕಾಲು ಪರೀಕ್ಷೆಮಾಡಿದೆ. ಕಾಲು ಕಾಲಾಗೇ ಇತ್ತು. "ಏನೂ ಕಾಣಿಸಲಿಲ್ಲವಲ್ಲಪ್ಪ, ಬೂಡ್ಸು ಹಾಕಿಕೋ" ಅಂತ ಹೇಳುತ್ತಾ ಅಭ್ಯಾಸ ಬಲದಿಂದ ಬೂಡ್ಸು ಝಾಡಿಸಿ ಅವನ ಕೈಗೆ ಕೊಡಬೇಕು, ಅಷ್ಟರಲ್ಲೇ ಬೂಡ್ಸಿನಿಂದ ಎರಡು ಮಾತ್ರೆ ಹೊರಕ್ಕೆ ಬಿತ್ತು. "ಹೌದಪ್ಪಾ ಎರಡು ಮಾತ್ರೆಗಳಿಂದಲೇ ನಿನ್ನ ಕುಂಟುನೋವು ಹೋಗುತ್ತೆ" ಎಂದು ಹೇಳಿ ಕಳಿಸಿದೆ,

ಪತ್ನಿ ಸಮೇತ ಶಾಮಾಭಟ್ಟ ದವಾಖಾನೆಗೆ ಆತುರ ಆತುರವಾಗಿ ಬಂದ. ಗಂಡ ಹೆಂಡಿರ ಇಬ್ಬರ ಮುಖದಲ್ಲೂ ತೀವ್ರ ಕಳವಳ ತೇಲಾಡುತ್ತಿತ್ತು.

"ಡಾಕ್ಟರೇ? ನಿನ್ನೆ ಸಂಜೆ ಮುಂದೆ ಅಸಾಧ್ಯ ಎದೆನೋವು ಬಂದಿತ್ತು. ಇವಳೂ ಮನೆಯಲ್ಲಿತ್ತಿಲ್ಲ. ಹಾರ್ಟ್ ಫೈಲ್ ಆಗಿ ಸತ್ತುಗಿತ್ತು ಹೋದರೆ ಹೇಗಪ್ಪಾ? ಎಂದು ತುಂಬಾ ಹೆದರಿಕೆ ಆಯ್ತು. ಹೋದ ತಿಂಗಳು ನನ್ನ ಹೆಂಡತೀಗೆ ಎದೆ ನೋವು ಬಂದಿದ್ದಾಗ, ನೀವು ಕೆಲವು ಮಾತ್ರೆಗಳನ್ನೂ ಕೊಟ್ಟು, ನೋವು ಬಂದಾಗ ಒಂದು ತೊಗೊಳ್ಳಿ, ತುಂಬಾ ನೋವು ಕಾಣಿಸಿಕೊಂಡರೆ ಎರಡು ನುಂಗಿ ಅಂತ ಹೇಳಿತ್ತಿಲ್ಲವೇ? ಅದು ಜ್ಞಾಪಕ ಬಂತು. ಅವಳ ಬೀರೂ ಗೂಡನ್ನು ತೆಗೆದು ನೋಡಿದೆ. ಒಂದು ಭರಣಿಯಲ್ಲಿ ಆ ಪುಟಾಣಿ ಮಾತ್ರೆಗಳಿತ್ತು, ಬೇಗ ಎರಡು ತೆಗೆದುಕೊಂಡು, ಅಡಿಗೆ

ಮನೆಗೆ ಹೋಗಿ, ಒಂದು ಗುಟುಕು ನೀರಿನ ಜತೆಗೆ ಎರಡು ಮಾತ್ರೆಗಳನ್ನೂ ನುಂಗಿದೆ. ಸ್ವಲ್ಪ ಹೊತ್ತಿನಲ್ಲಿ ಎದೆ ನೋವು ನಿಂತು ಹೋಯಿತು. ಆಮೇಲೆ ಏನೋ ಓದ್ತಾ ಇದ್ದೆ. ಅರಿಶಿನ ಕುಂಕುಮಕ್ಕೆ ಹೋಗಿದ್ದಾಕೆ ಹಿಂತಿರುಗಿ ರಾತ್ರಿ ಎಂಟರ ಹೊತ್ತಿಗೆ ಬಂದಳು. ಹಸಿವೂ ಆಗಿತ್ತು. ಊಟ ಮಾಡಿ ಮಲಗಿದೆವು.

ಇವತ್ತು ಬೆಳಿಗ್ಗೆ ತಿಂಡಿ ತಿಂದು ಕಾಫಿ ಕುಡಿಯುತ್ತಿದ್ದಾಗ ನನ್ನ ಹೆಂಡತಿ ಮುನಿಸಿಕೊಂಡಳು." ಸ್ವಲ್ಪ ಹೊತ್ತು ಹೊರಗೆ ಹೋದರೆ ಸಾಕು. ನನ್ನ ಬೀರು ಗೂಡನ್ನೆಲ್ಲಾ ತನಿಖೆ ಮಾಡ್ತೀರಿ. ಹೆಂಗಸರ ಸಾಮಾನು ಏನೇನೋ ಇರುತ್ತೆ. ತೌರಿನ ಕಾಗದ ಇರುತ್ತೆ ಒಡವೆ ಇರುತ್ತೆ ಮಂಕಿ ಇರುತ್ತೆ, ಅದನ್ನೆಲ್ಲಾ ಗಂಡಸರು ನೋಡ ಬಾರದು. ಮರ್ಯಾದಸ್ಥ ಗಂಡಸರು ಹುಡುಕಿ ನೋಡಬಾರದು" ಎಂದು ತಗಲಿ ಕೊಂಡಳು. "ಹೀಗೆ ಕಣೆ, ಎದೆ ಶೂಲೆ ನಿನ್ನೆ ಸಂಜೆಮುಂದೆ ಬಂತು. ಎರಡು ಮಾತ್ರೆ ನಿನಗೆ ಕೊಟ್ಟಿದ್ದು, ನಾನು ತೆಗೆದುಕೊಂಡೆ. ಶೂಲೆ ಕಡಿಮೆಯಾಯ್ತು, ಇನ್ನೇನೂ ಹುಡುಕಲಿಲ್ಲ ಕಣೇ ಮಹರಾಯ್ತಿ" ಎಂದು ನಾನು ಹೇಳಿದೆ.

"ಅಯ್ಯೋ! ಇದೇನು ಅಂದ್ರೆ. ಡಾಕ್ಟರು ಕೊಟ್ಟ ಮಾತ್ರೆಗಳು ಅವತ್ತೇ ಮುಗಿದು ಹೋದುವು. ಭರಣೀಲಿ ಕರೀಮಣಿಗಳನ್ನು ಇಟ್ಟಿದ್ದೆ. ಆಮೇಲೆ ಚಿನ್ನದ ತಂತೀಲಿ ಸುತ್ತಿಸೋಣ ಅಂತ. ಅದನ್ನೇನಾದರೂ ?" ಅಂತ ಅಂದಳು.

ನಾನೂ ಬೀರು ಗೂಡಿನ ಹತ್ತಿರ ಹೋಗಿ ನೋಡಿದೆ. ಆ ಭರಣಿಯಿಂದಲೇ ೨ ಮಾತ್ರೆ ನಾನು ತೊಗೊಂಡಿದ್ದು. ನಿನ್ನೆ ಸಂಜೆ ಕತ್ತಲು. ಗಾಬರಿ. ಸರಿಯಾಗಿ ಕಾಣಿಸಿರ ಲಿಲ್ಲ. ಬೆಳಿಗ್ಗೆ ಬೆಳಕಿನಲ್ಲಿ ನೋಡಿದರೆ ಕರಿಮಣಿ, ನುಂಗಿಬಿಟ್ಟಿದ್ದೀನಲ್ಲಾ ಡಾಕ್ಟರೆ ಈಗೇನು ಮಾಡಲಿ ?" ಅಂತ ಖಿನ್ನನಾದ ಶಾಮಾಭಟ್ಟ.

"ನನಗಾದರೂ ಬುದ್ಧಿ ಬೇಡವೇ ? ಗಂಡಸರು ಮಕ್ಕಳ ಕೈಗೆ ಸಿಗೋ ಹಾಗೆ ಕರೀಮಣೀನ ಇಟ್ಟಿದ್ದೆನಲ್ಲಾ ? ಬೀಗ ಬಡಕೋಬಾರದಾಗಿತ್ತೆ" ಅಂತ ಶಾಮಾ ಭಟ್ಟನ ಹೆಂಡತಿ ಅಳುಕ್ಕೇ ಶುರು ಮಾಡಿದಳು.

"ಕರೀಮಣಿ ನುಣುಪಾಗಿರುತ್ತೆ. ನುಂಗಿದಮೇಲೆ ಏನೂ ತ್ರಾಸಾಗುಲ್ಲ. ಅದರ ಪಾಡಿಗೆ ಅದು ವಿಸರ್ಜನೆಯಾಗುತ್ತೆ, ಏನೂ ಕಾಳಜಿಬೇಡ.

ಆದರೂ, ತಾಯಿ. ನಿನ್ನೆ ನಿಮ್ಮ ಯಜಮಾನರಿಗೆ ಸಖತ್ ಎದೆ ಶೂಲೆ ಬಂದಾಗ ಎರಡು ಕರೀಮಣಿ ನುಂಗಿದರು. ಎದೆಶೂಲೆ ಹೋಯ್ತು ರಾತ್ರಿ ಉಂಡರು. ಉಂಡು ಮಲಗಿದಿರಿ. ಆಮೇಲೆ ಸುಖವಾಗಿ ನಿದ್ದೆ ಹತ್ತಿತು.

ಅದಕ್ಕೇಮ್ಮ ಹಿರಿಯರು ಹೇಳೋದು, "ನಿಮ್ಮ ಮಾಂಗಲ್ಯ ಪುಣ್ಯದಿಂದ ನಿಮ್ಮ ಕರೀಮಣಿ ಪ್ರಭಾವದಿಂದ, ಗಂಡನೆ ಎದೆಶೂಲೇನೂ ಹೋಗುತ್ತೆ. ಯಮನ ಕಾಟಾನೂ ತಪ್ಪಿಸುತ್ತೆ" ಎಂದು ಸಮಾಧಾನ ಹೇಳಿ ಕಳಿಸಿದೆ.

ಕುಮಾರ್

● ● ಹುತ್ತ ಕಟ್ಟಿದರೆ ● ●

"ಗೆದ್ದಿಲು ಹುಳುಗಳ ಪ್ರಪಂಚದಲ್ಲಿ ದಿನದಿನವೂ" ಪಾಪ್ಯುಲೇಷನ್ ಎಕ್ಸ್ಪ್ಲೋಷನ್" ಬಡ ಮುತ್ತೈದೆಯ ತರಹ ಇಜ್ಜೋಡಿ ಅವಳಿ ಮಕ್ಕಳನ್ನು ಕ್ಷಣಕ್ಷಣಕೂ ಹೆರುತ್ತಲೇ ಇರುತ್ತವೆ. ಈ ಬಡ ಮಕ್ಕಳೆಲ್ಲಾ ದುಡಿದು ದುಡಿದೂ ಹುತ್ತಗಳನ್ನು ಆಳುದ್ದ ಕಟ್ಟುತ್ತವೆ ಮುಂದಿನ ಪೀಳಿಗೆಯ ಮಕ್ಕಳಿಗೆಲ್ಲಾ ಒಳ್ಳೆ ದಿವನಾದ ಅರಮನೆಯಂತಹುದು ಬಾಳಲು ಸಿಗಲಿ ಅಂತ ಯೋಜನೆ ಹಾಕಿಕೊಂಡು ಹೀಗೆ ಜೀವವಿಡಿ ಕಷ್ಟ ಪಟ್ಟು ಆಲಯುವ ಕಟ್ಟಿದರೆ ಕಡೆಗೆ ಆಗುವುದು ಏನು ಅಂತೀರಿ? ಹಾವುಗಳು ಬಂದು ಆ ಹುತ್ತಗಳಲ್ಲಿ ಸೇರಿಕೊಂಡು ಬಿಡುತ್ತವೆ ಅನಂತರ ಗೆದ್ದಲು ಮರಿ ಮಕ್ಕಳಿಗೆಲ್ಲಾ ಕುಂತಿ ಮಕ್ಕಳಪಾಡೇ !"

ಎಂದು ನಮ್ಮ ಜೂಆಲಜಿ ಮಾಸ್ತರು ಪಾಠ ಹೇಳಿದರು. ಚಿತ್ರಗಳನ್ನೂ ತೋರಿಸಿದರು, ಗೆದ್ದಿಲ ಮಾತೆಯನ್ನೂ ತೋರಿಸಿದರು ಮಕ್ಕಳು ಮರಿಗಳನ್ನೂ ತೋರಿಸಿದರು.

ಆ ಪಾಠ ಕೇಳಿದಾಗ ಭಾರತಮಾತೆಯ ಜ್ಞಾಪಕ ಬಂತು ನನಗೆ. ನಮ್ಮಲ್ಲೂ "ಪ್ಯಾಪುಲೇಷನ್ ಎಕ್ಸ್ಪ್ಲೋಷನ್" ಮುಂದಿನ ಪೀಳಿಗೆಗಳಿಗೆ ಅನುಕೂಲವಾಗಿರುವಂತೆ ನಾವು ಸೌಧ ಕಟ್ಟಬೇಕು ಅಂತ ಮಹಾತ್ಮರು, ಲೋಕಮಾನ್ಯರು, ದೇಶಬಂಧುಗಳು ಇತ್ಯಾದಿ ದೈವೀಸಂಭೂತರು ಉಪದೇಶ ಮಾಡಿದರು, ಗೆದ್ದಿಲು ಹುಳುಗಳೆಲ್ಲಾ ಸೈ ಅಂತ ಕೂಗಿ, ಆಳುದ್ದದ ಹುತ್ತಗಳನ್ನು ಕಟ್ಟಿದರು. ಹೊಟ್ಟೆಕಟ್ಟಿ ಬಟ್ಟೆ ಸೊಂಟಕ್ಕೆ ಬಿಗಿದು ದುಡಿದರು. ಬೆವರು ಸುರಿಸಿ ಉಪವಾಸ ಮಾಡಿ ಮುಂದಿನ ಪೀಳಿಗೆಗಳ ಮಕ್ಕಳು ಮರಿಗಳು ಚೆನ್ನಾಗಿ ಬಾಳಲಿ ನಗುತ ನಗುತ ಹೊಟ್ಟೆ ತುಂಬಾ ಉಂಡು ಮೋಜುಮಾಡಲಿ ಅಂತ ಆಸೆ ಇಟ್ಟುಕೊಂಡು ತಮ್ಮ ಬಾಳಿನ ಯಜ್ಞವನ್ನೇ ಮಾಡಿಕೊಂಡರು.

ಎಂತಹ ಸೌಧವನ್ನು ಕಟ್ಟಿದರು ಅಂತ. ಆಳುದ್ದ ಮಾತ್ರ ಅಲ್ಲ. ಬೆಟ್ಟದುದ್ದ ಮನೆಯನ್ನು ಗುಡ್ಡದಷ್ಟು ಅಡ್ಡಗಲದ ಮನೆಯನ್ನು ಕಟ್ಟಿದರು. ಈ ಹುತ್ತದ ಒಳಗೆ ಹೊಕ್ಕು ನೋಡಿದರೆ ಹತ್ತು ಹದಿನೆಂಟು ದೊಡ್ಡ ದೊಡ್ಡ ಮಹಲುಗಳು, ಒಂದೊಂದು ಮಹಲಿನಲ್ಲೂ ಅಲ್ಲಿರುವ ಗೆದ್ದಿಲು ಹುಳುಗಳು, ಅವರುಗಳ ಮಾತೃಭಾಷೆಯಲ್ಲೇ ಮಾತನಾಡಿಕೊಳ್ಳುತ್ತ ಮೆರೆಯುತ್ತಿದ್ದವು.

ಆಗ ನೋಡಿ ! ಮಾತೃಭಾಷೆಯಲ್ಲೇ ಭಾಷೆಕೊಟ್ಟು, ಛತ್ರಪತಿಗಳಂತೆ ಹಣೆಯಮೇಲೆ ತಿಲಕ ಹಚ್ಚಿಕೊಂಡು, ಹಾವುಗಳು ಮಹಲು ಮಹಲಿನಲ್ಲೂ ಹರಿದು ಬಂದವು. ಆ ಹೆಡೆಗಳ ಸ್ವಾರ್ಥ ಅಹಂಕಾರವು ಗೆದ್ದಿಲ ಮಾತೆಯ ಮಕ್ಕಳಿಗೆ ಕಾಣಿಸದೆ ಇರಲಿ ಎಂದು ಶುಭ್ರ ಬಿಳಿ ಖದ್ದರ ಕಿರೀಟವನ್ನು ಧರಿಸಿದವು.

—ಬಿಷ್ಟ

ನೀರಮೇಲೆ ನಾಟ್ಯ

●

ಬೊಂಬಾಯಿಯಲ್ಲಿ ಎಲ್. ಎಸ್. ರಾವ್. ಎಂಬ ನಮ್ಮ ಕಡೆಯ ಹಠ ಯೋಗಿ ನೀರಲ್ಲಿ ನಡೆಯಲು ಹೋಗಿ ಮುಳುಗಿದನಂತೆ. ಐನೂರು ನೂರು ರೂಪಾಯಿ ತೆತ್ತು ಟಿಕೆಟ್ಟು ಕೊಂಡವರು ರಾವ್ ಅವರು ನೀರಲ್ಲಿ ನಡೆವಾಗ ಎಡವಿ ನೆಲ ಮುಟ್ಟಿದಾಗ ಸಿಟ್ಟಿಗೆದ್ದರಂತೆ. ರಾವ್ ಅನೇಕರ ಕೋಪ ಶಮನ ಮಾಡಲು ಹಣವನ್ನು ಹಿಂದಿರುಗಿಸಿದರಂತೆ. ನಡೆವರೆಡೆಹದೆ ಕುಳ್ಳಿರುವರೆಡಹುವರೆ ?

ಈ ಹಟಯೋಗದಲ್ಲಿ ಮುಗ್ಗರಿಸಿದ್ದಕ್ಕೆ ಈ ಪಾಟಿ ಕೋಪವೇಕೆ. ಪಾಪ! ರಾಯರು ಬಹಿರಂಗವಾಗಿ ಈ ಯೋಗಸಾಧನೆ ಮಾಡುವುದಾಗಿ ಟಾಂಟಾಂ ಮಾಡಿಸಿಕೊಂಡು ನಂದಾಜಿ ರಾಷ್ಟ್ರಪತಿ ಇತ್ಯಾದಿಗಳೆದುರಿಗೆಲ್ಲಾ ಕೈಮುಗಿದು ಆಹ್ವಾನಿಸಿದ ಚಿತ್ರಗಳನ್ನು ಪೇಪರಿನನೊಳಗೆ ಹಾಕಿಸಿಕೊಂಡು ಕೈಗೊಂಡ ಪ್ರಯೋಗ ಎಡವಟ್ಟಾದಾಗ ಎಲ್ಲರಿಗೂ ಕೋಪಬಂದು ಇದೆಲ್ಲಾ ಬೂಟಾಟಿಕೆ ಎಂದು ಶಂಕಿಸಿ ನಮ್ಮ ಯೋಗವಿದ್ಯೆಯ ಮೇಲೇ ಅನುಮಾನ ಬಂದುಬಿಡುತ್ತದೆ.

ಈ ರಾವ್ ಅವರ ಧೈರ್ಯ ಸಾಹಸಗಳನ್ನು ಭಾರತೀಯರೆಲ್ಲರೂ ಮೆಚ್ಚಬೇಕು. ಆತ ಸೆಂಟ್ರಲ್‌ನಲ್ಲಿ ಮಂತ್ರಿ ಆಗಿದಿದ್ದರೆ ಈ ಸಾಹಸಕ್ಕೆ ಒಂದು ಪಂಚವಾರ್ಷಿಕಯೋಜನೆಯ ವಿಭಾಗ ಎಂದು ಹೆಸರಿಟ್ಟದ್ದರೆ ಎಲ್ಲರೂ ಅದನ್ನ ಸ್ವಾಗತಿಸಿ ಯೋಜನೆಗಳೆಲ್ಲಾ ನೀರಮೇಲೆ ನಡೆಯುವಂತೆಯೇ ಆಗುವುದರಿಂದ ಈ ಒಂದು ಜಲನಾಟ್ಯವೂ ಯೋಜನೆಯೂ ವಿಫಲವಾಯಿತೆಂದು ಇಡೀ ದೇಶ ಏನೂ ಆಗಿಲ್ಲವೆಂಬಂತೆ ತನ್ನ ಪಾಡಿಗೆ ತಾನಿರುತ್ತಿತ್ತು.

ಒಂದು ರೀತಿಯಲ್ಲಿ ನಾವು ಈ ನಮ್ಮ ನಾಯಕಮಣಿಗಳ ಆಡಳಿತಕ್ಕೆ ಸಿಕ್ಕು ೧೯೪೭ ರಿಂದ ೧೯೬೬ರ ವರೆಗೆ ಇಡೀ ನಾಡಿನ ಜನ ವರ್ಷದಿಂದ ವರ್ಷ ಬದುಕಿ ಬಂದಿರುವುದು ಕಡಿಮೆ ಹಟ ಯೋಗವೆ ? ಇದೂ ಒಂದು ನೀರಮೇಲೆ ನಡೆವ ಸಾಹಸದಂತಿಲ್ಲವೆ ?

ಜಲಾಶಯುಗಳು ಭಕ್ರಾ ನಾಂಗಲ್, ಶರಾವತಿ ನದಿಯ ಜಲಪಾತ ಜಲಪಾತದ ನೀರನ್ನೂ ಹಿಡಿದು ಅಡ್ಡಗಟ್ಟಿ ಅದರಿಂದ ವಿದ್ಯುತ್ ದೀಪಗಳನ್ನು ಬೆಳಗಿಸುವಾಗ ಮಂತ್ರಿಗಳು ಎಂತಹ ಹಟಯೋಗದಲ್ಲಿ ತೊಡಗಿದ್ದರು! ಶರಾವತಿಯ ವೇಗದ

ಬಡಿತಕ್ಕೆ ಸಿಕ್ಕು ನುಚ್ಚು ನೂರಾಗುವ ಆಪಾದನೆಗಳ ಹೊಡೆತದಾಟಿ ನೀರಮೇಲೆ ನಡೆದು ಬಂದುದು ಎಲ್. ಎಸ್. ರಾವ್ ಮಾಡುವೆನೆಂದಿದ್ದ ಚಮತ್ಕಾರಕ್ಕಿಂತ ದೊಡ್ಡದಲ್ಲವೆ ?

ಈ ಸಾಹಸಗಳ ಮುಂದೆ ಈ ರಾಯು ಏನು ಹಟಯೋಗಮಾಡಿಯಾನು ! ಹಳೆಯ ಕಾಲದಲ್ಲಿ ಜೀಪು ಕೊಂಡದ್ದು ಮರೆಯುವುದುಂಟೆ ? ಇತ್ತೀಚಿನ ಖಾದಿ ಗ್ರಾಮೋದ್ಯೋಗದ ಗುಳುಂ ವ್ಯಾಪಾರ ಎಂತಹ ಬೆಂಕಿಯಮೇಲೆ ನಡೆದ ಸಾಹಸ! ಒಂದೇ ಎರಡೇ ಪ್ರತಿಪ್ರಾಂತ್ಯದಲ್ಲಿಯೂ ನಮ್ಮ ಕಾಂಗ್ರೆಸ್ ಮುಂದಾಳುಗಳಿಂದ ಒಂದಲ್ಲ ಒಂದು ರೀತಿಯ ಹಟಯೋಗವನ್ನು ದಿನ ಪತ್ರಿಕೆಗಳಲ್ಲಿ ನಾವು ಓದುತ್ತಲಿಲ್ಲವೆ ?

ಮುಂದ್ರಾ ಎಂಬ ಸಾಹಸೀ ವ್ಯಾಪಾರಿಯ ದೆಸೆಯಿಂದ ಟಿ. ಟಿ ಕೆ. ಮೊದಲ ಬಾರಿ ಆಸಿಡ್ ಕುಡಿಯುವ ಹಟಯೋಗಿಯಂತೆ ಸೋತು ಮನೆಗೆ ಹೋದರು. ಮತ್ತೆ ಬಂದರು ಮತ್ತೆ ಪಾಪ ಅವರ ಸತ್ವ ಪರೀಕ್ಷೆ ಕಾಲ ಮುಗಿದಿರಲಿಲ್ಲ. ಪಾರ್ಲಿಮೆಂಟ್ ಮೆಂಬರುಗಳೇ ಈ ಶ್ರೀಮಂತ ಖಾದಿ ಧಾರಿ ವ್ಯಾಪಾರಿಯ ಮೇಲೆ ಆಪಾದನೆ ಪಟ್ಟಿ ಕಳಿಸಿದರು. ಸಿಟ್ಟಿಗೆದ್ದ ಟಿ. ಟಿ. ಕೆ. "ನೀರಮೇಲೇ ನಡೆವ ಹಟ ಯೋಗಿ ನಾನು ನನ್ನಲ್ಲಿ ಅನುಮಾನವಿದ್ದರೆ ಇಗೋ ರಾಜಿನಾಮೆ" ಎಂದು ಬರೆದು ಕೊಟ್ಟರೆ ಶಾಸ್ತ್ರೀಜಿ "ತತ್ಸ್ತು" ಅಂತ ಅಸ್ತು ಅಂದು ಟಾಷ್ಕೆಂಟಿಗೆ ನಡೆದು ಬಿಡೋದೆ ! ಈ ರೀತಿಯಲ್ಲಿ ಈ ಉದ್ದಾಮ ಕೈಗಾರಿಕೋದ್ಯಮಿ ಬಡವರ ಬೀಡಾದ ಭಾರತದ ನೀರಿನಲ್ಲಿ ಸರ್ಕಸ್ ಮಾಡಲು ಹೋಗಿ ಮುಳುಗೇ ಹೋದರು.

ಇನ್ನು ಮುರಾರ್ಜಿಯ ಸರ್ಕಸು—ನಮ್ಮ ಹನುಮಂತಯ್ಯನವರು ಡೋಲು ಬಡಿದು ಪಾಪ ಈ ಚಿನ್ನದಂತಹ ಮನುಷ್ಯನ್ನ ಇಂದ್ರಾಜಿಗೆ ಎದುರಾಗಿ ಗಣೆ ಹತ್ತಿಸಿ ಮೇಲಿರಿಸಿ ಧೊಪ್ಪಗೆ ನೇರವಾಗಿ ನೀರಲ್ಲೇ ಬಿದ್ದು ಏಳಲಾರದಂತೆ ಮುಳುಗಿಹೋದ ಹಟಯೋಗ ನೋಡಿ ಜನ ಕಡಿಮೆ ನಕ್ಕರೆ ?

ಈ ಎಲ್ಲ ಬಿಟ್ಟರೆ ಸತತ ಎಲ್ಲ ನಾಯಕರ ಪ್ರಯತ್ನದಿಂದ ಇಡೀ ಭಾರತದ ಪ್ರಜಾಕೋಟಿಗಳನ್ನೇ ಹಟಯೋಗಿಗಳನ್ನಾಗಿ ಪರಿವರ್ತಿಸುತ್ತಿರುವುದು ಕಡಿಮೆ ಪವಾಡದ ಕೆಲಸವೇ ?

"ಜನ ಸಾಕೋ" ಎಂದು ಕೂಗುವಷ್ಟು ಜನಸಂಖ್ಯೆ ಇದ್ದು ಎಷ್ಟು ಬಳುಮೆ ಮಾಡಿದರೂ ಮಿಗುವಷ್ಟು ಭೂಮಿ ಇಟ್ಟುಕೊಂಡು ತಿನ್ನುವ ಕೂಳಿಗೆ P L. 480-ಗೆ ಭಿಕ್ಷಾಪಾತ್ರೆ ಹಿಡಿಯುವಂತೆ ಮಾಡಿರುವರಲ್ಲಾ—ಇದನ್ನು ಸಹಿಸಿಕೊಂಡು ಜನ ಕುರಿಗಳಂತೆ ತಲೆ ತಗ್ಗಿ ಬೆಂಕಿಯಲ್ಲೇ ನಡೆಯುವರಂತೆ ಬಾಳ್ವೆ ಮಾಡಿದ್ದಾರಲ್ಲಾ? ಇದು ಯಾವ ಹಟಯೋಗಕ್ಕೆ ಕಡಿಮೆ ?

ದಿನಬೆಳಗಾದರೆ ಭಾಷಣಗಳಲ್ಲಿ ಉಪದೇಶ ಮಾಡುವವರ ಮಾತು ಕೇಳಿ ಕೇಳಿ ಕಿವಿ ತೂತು ಬಿದ್ದುದ್ದು ಆಸಿಡ್ ಕುಡಿದದ್ದಕ್ಕೆ ಸಮ.

ದಿನದಿಂದ ದಿನಕ್ಕೆ ಹಾವಿನ ವಿಷ ಏರಿದಂತೆ— ಕೋಠಿಗಳಲ್ಲಿ ಕೂಡಿಟ್ಟು ಕೂಡಿಟ್ಟು ಬೆಲೆ ಏರಿಸಿ ಏರಿಸಿ ಕೋಟಿ ಕೋಟಿ ಗಳಿಸುತ್ತಿರುವ ಕಳ್ಳ ಕರೀಪೇಟೆ ವ್ಯಾಪಾರಿಗೆ ಗುಂಡಿಟ್ಟು ಕೊಲ್ಲಲಾಗದಂತೆ ಕಾಪಾಡಿಕೊಂಡು, ಕಾಯ್ದುಕೊಂಡು ಬಂದು, ಅವರುಗಳ ಸಂಘದಲ್ಲೇ ಆಳುವವರು ಅವರನ್ನು ಹೊಗಳಿ ಧಣಿಕರೇ ದೇಶದ ಆಧಾರ ಸ್ತಂಭ ಎಂದು ಅವರಿಂದ ಹಾರಾ ಹಾಕಿಸಿಕೊಂಡು ಬರುವುದನ್ನೂ ನೋಡಿಯೂ ಏನೂ ಮಾಡಲಾಗದ ಈ ಮೂಕಪಶುಗಳಂತಹ ಜನತೆಯ ಜೀವನ ಯಾವ ನೀರ ಮೇಲಿನ ನಡೆಗೆ ಕಡಿಮೆ ?

ಈ ರೀತಿಯಲ್ಲಿ ನಮ್ಮ ನಾಡಿನ ಪ್ರತಿಯೊಂದು ರಾಷ್ಟ್ರೀಯ ಚಟುವಟಿಕೆಯೂ ಪ್ರಚಂಡ ಅಪಜಯದೊಡನೆ ಎಸ್. ಎಸ್. ರಾಯನ ನೀರಮೇಲಿನ ನಡಿಗೆಯಂತೆಯೇ ಆಗಿಹೋಗುತ್ತಿದೆ. ಆದ್ದರಿಂದ— ಈ ಹಟಯೋಗಿ ವಿಫಲನಾದದ್ದಕ್ಕೆ ಯಾರೂ ಆತನನ್ನು ಆಕ್ಷೇಪಿಸಿ. ದಂಡನ್ನು ವಾಪಸ್ಸು ಕೇಳಬಾರದು, ಸರ್ಕಾರಕ್ಕೆ ಹೋದ ಹಣ— ಚಟ್ಟವನ್ನೇರಿದ ಹೆಣ ಹಿಂದಿರುಗುವುದುಂಟೆ ? ಅಂತ ಹೇಳಿ ನಮ್ಮ ಮಂತ್ರಿಗಳನ್ನೇ ತೆಗೆಯಲು ಸಾಧ್ಯವೇ? ಸರ್ಕಾರವೇ ಬೇಡ ಅನ್ನಲಾದೀತೆ? ನೀರಮೇಲೆ ನಡೆಯು ವಂತಹ ಸಾಹಸದ ರಾಜಕೀಯ ಜಲನಾಟ್ಯ ನಡೆಯಲೇಬೇಕು—ಜನ ಹೀಗೆ ಕಂಗೆಟ್ಟು ನರಳಲೇಬೇಕು.

॥ ಜೈ ಕರ್‌ನಾಟಕ್ ॥

...ದಾಶರಥಿದೀಕ್ಷಿತ್

ಅನಾವೃಷ್ಟಿ ಪ್ರದೇಶಗಳಿಗೆ ನಮ್ಮ ನಾಯಕರುಗಳ ತಂಡ ಮೇಲಿಂದ ಮೇಲೆ ಭೇಟಿ ಇತ್ತ ಕಾರಣ

—ಅಲ್ಲಿನ ಕ್ಷಾಮ ಪರಿಸ್ಥಿತಿ ಇನ್ನು ಭೀಕರವಾಯಿತು ಎನ್ನುವುದು ಸತ್ಯ ವಾಗಿದ್ದಿರಬಹುದಾದರೂ ಕುಚೋದ್ಯ !

*　　*　　*　　*

ಸ್ಫುರದ್ರೂಪಿಯಾದ ಶ್ರೀಮಂತ ಹೇಳಿದಹಾಗೆ ಕೇಳುವ ಗಂಡನನ್ನು ಪಡೆಯಲು ಏನು ಮಾಡಬೇಕು ಎಂದು ಮಿಟಿಕಲಾಡಿ ಮೀನಾಕ್ಷಿ ಕೇಳಿದ್ದಾಳೆ.

—ಆಕಾಶವಾಣಿಯಲ್ಲಿ ಸಾಮಗ್ರಿ ಬೆಲೆ ಕೇಳಿಕೊಂಡು ವ್ಯಾಪಾರಕ್ಕೆ ಹೋದವರ ತರಹಾನೇ ತಾಯಿ ! ನಿನ್ನ ಹುಡುಕಾಟ !

ಹೊಟ್ಟೆ ಉರಿಯುತ್ತದೆಯೆ ?

ಕೈಕಾಲು ಸೋಲುತ್ತದೆಯೆ ?

ಮೆಡಶಿರ ಬಿಗಿಯುತ್ತದೆಯೆ ?

ಹೀಗಾಗಲು ಮನಸ್ಸಿನ ಆತಂಕಗಳು ಕಾರಣವೇ ?

— ಅರಿತು ಗುಣಪಡಿಸಿಕೊಳ್ಳಲು —

ಮನೋನಂದನ ವನ್ನು

ಓದಿ

★

ರೋಗಿಗಳ ಸ್ವಂತ ಅನುಭವಗಳು — ಮನಸ್ಸಿನ ಸ್ವರೂಪ

ಡಾ॥ ಎಂ. ಶಿವರಾಂ, ಬಿ.ಎ., ಎಂ.ಬಿ., ಬಿ.ಎಸ್.,

ಅವರಿಂದ

★

ಪ್ರತಿಗಳಿಗೆ

771, ವಿದೇಹ

೧೭ ನೇ ಕ್ರಾಸ್ ರಸ್ತೆ :: ಮಲ್ಲೇಶ್ವರ

ಬೆಂಗಳೂರು-೩

Edited and Published by M. Sivaram
Printed by B. S. Iyengar, Bangalore-2